# ಶ್ರವಣ, ಮನನ, ನಿದಿಧ್ಯಾಸನ




ಲೇಖಕರು :

ಬ್ರಹ್ಮಜ್ಞಕವಿ ಶ್ರೀದೇವರಾಯ ಕುಲಕರ್ಣಿ (ಹೊಂಬಳ)



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

www.adhyatmaprakasha.org

2010

ಆತ್ಮವಿಜ್ಞಾನಕ್ಕೆ ಸಾಕ್ಷಾತ್ ಸಾಧನೆಗಳು

# ಶ್ರವಣ, ಮನನ, ನಿದಿಧ್ಯಾಸನ

ಅಥವಾ

# ಅಧ್ಯಾತ್ಮಯೋಗ

ಲೇಖಕರು :

**ದೇವರಾಯ ಕುಲಕರ್ಣಿ**

ಕ್ರಮಾಂಕ : 243

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂರವಾಣಿ : 08173 273820
www.adhyatmaprakasha.Org.
2010

SRAVANA MANANA NIDHI DYASANA -
Written by DEVARAYA KULAKARNI
Published by Adhyatma Prakasha Karyalaya, Public Charitable Trust, Holenarasipur - 573211(INDIA)
Phone : 08175-273820 www adhyatmaprakasha.org.

ಮೊದಲನೆಯ ಮುದ್ರಣ 1993 (2000 ಪ್ರತಿಗಳು)
ಎರಡನೆಯ ಮುದ್ರಣ 2010 (1000 ಪ್ರತಿಗಳು)

ಪುಟಗಳು : 6+38 = 44

ಬೆಲೆ : ರೂ. 10/

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :
ಪ್ರಶಾಂತ್ ಎಂಟರ್‌ಪ್ರೈಸಸ್
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂಗಳೂರು – 560 028
ದೂರವಾಣಿ: 26761529

ಮುದ್ರಣಸ್ಥಾನ :
ಶ್ರೀರಾಮ ಪ್ರಿಂಟರ್ಸ್
ನಂ. 25, 15ನೇ ಅಡ್ಡರಸ್ತೆ 5ನೇ ಮುಖ್ಯರಸ್ತೆ
ಶ್ರೀನಿಧಿ ಬಡಾವಣೆ, ಬೆಂಗಳೂರು – 560 062
ದೂ. 98453 46197

# ಮುನ್ನುಡಿ

ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳಂತೆ ಆತ್ಮ ವಿಜ್ಞಾನಕ್ಕೆ ಸಾಧನೆಗಳು ಮೂರು ಪ್ರಕಾರವಾಗಿವೆ. ಅದರಲ್ಲಿ–

1. ''ಕರ್ಮಯೋಗ–ಉಪಾಸನೆ'' ಎಂಬ ಪರಂಪರಾಸಾಧನೆಗಳನ್ನು (ಶ್ರೀಮದ್ಭಗವದ್ಗೀತೆ ಹಾಗೂ ಉಪನಿಷತ್ತುಗಳಲ್ಲಿ ಹೇಳಿರುವ ಈ ಸಾಧನೆಗಳನ್ನು) ಬ್ರಹ್ಮಸೂತ್ರಗಳಲ್ಲಿ ಚರ್ಚಿಸಿ ನಿರ್ಣಯಿಸಿರುತ್ತದೆ.

2. ಅಮಾನಿತ್ವಾದಿಗಳು (ಗೀ. 13–7 ರಿಂದ 11) ಬುದ್ಧಿ ವಿಶುದ್ಧತ್ವಾದಿಗಳು (ಗೀ. 18–51 ರಿಂದ 54) ಹಾಗೂ ಸಾಧನ ಚತುಷ್ಟಯ ಸಂಪತ್ತಿ(ಸೂ. ಭಾ. 1–1–1) ಇವೆಲ್ಲವುಗಳೂ ''ಸಹಕಾರಿ ಸಾಧನೆಗಳು''.

3. ''ಶ್ರವಣ, ಮನನ, ನಿದಿಧ್ಯಾಸನ ಇವುಗಳು ಸಾಕ್ಷಾತ್ ಸಾಧನೆಗಳು''

ಈ ಜನ್ಮದಲ್ಲಾಗಲಿ ಹಿಂದಿನ ಜನ್ಮದಲ್ಲಾಗಲೀ ಪರಂಪರಾ ಸಾಧನಗಳನ್ನು ಆಚರಿಸಿದ್ದರ ಫಲವಾಗಿ ಯಾರಿಗೆ ಸಹಕಾರಿ ಸಾಧನೆಗಳು ಅಳವಟ್ಟಿರುವವೋ ಅಂಥ ಜಿಜ್ಞಾಸುಗಳಿಗೆ ಮಾತ್ರ ಸಾಕ್ಷಾತ್ ಸಾಧನೆಗಳು ಉಪಯೋಗವಾಗುತ್ತವೆ. ಸರಿಯಾದ ಅಧಿಕಾರವಿಲ್ಲದವರಿಗೆ ಈ ಸಾಧನೆಗಳು ಬೌದ್ಧಿಕ ವಿಚಾರ ಸರಣಿಯಂತೆ ಅಥವಾ ತರ್ಕ ಅನುಮಾನಗಳಂತೆ ಕಾಣುವುದು ಸಹಜ. ಬುದ್ಧಿಯನ್ನೂ ಅಹಂಪ್ರತ್ಯಯವನ್ನೂ ಮೀರಿದ ಅನುಭವ ಸ್ವರೂಪವೇ ತಾನಾಗಿ ನಿಂತು ಅನುಭವ ಸ್ವರೂಪದ ವ್ಯಾಪ್ತಿಯನ್ನು ತನ್ನಲ್ಲಿ ತೋರುತ್ತಿರುವ ಪ್ರಪಂಚದಲ್ಲೆಲ್ಲ ಕಂಡು ದ್ವೈತಪ್ರಪಂಚವನ್ನು ಬಾಧಿತಗೊಳಿಸಿಕೊಂಡು ಕೇವಲಾತ್ಮನಾಗಿ, ಅದ್ವಿತೀಯನಾಗಿ ಸಹಜವಾಗಿ ನೆಲೆನಿಲ್ಲುವ ಆತ್ಮಜ್ಞಾನ ನಿಷ್ಠೆಯೇ ಈ ಸಾಕ್ಷಾತ್ ಸಾಧನೆಗಳಿಗೆ ಮುಖ್ಯಫಲವು. ಮೇಲೆ ತಿಳಿಸಿದ ಅಮಾನಿತ್ವಾದಿ ಸಾಧನ ಸಂಪತ್ತಿಯು ಅಂತಃಕರಣದಲ್ಲಿಲ್ಲದವರಿಗೆ ಈ ಮುಖ್ಯ ಫಲವು ಶ್ರವಣಾದಿಗಳನ್ನು ಅವಲಂಬಿಸಿದರೂ ಆಗಲಾರದು. ಶ್ರೀಶಂಕರರು ಗೀತಾಭಾಷ್ಯದಲ್ಲಿ ''ಯತನ್ತೋಽಪಿ ಶಾಸ್ತ್ರಾದಿಪ್ರಮಾಣೈಃ ಅಕೃತಾತ್ಮಾನಃ ಅಸಂಸ್ಕೃತಾತ್ಮಾನಃ ತಪಸಾ ಇನ್ದ್ರಿಯಜಯೇನ ಚ ದುಶ್ಚರಿತಾತ್

ಅನುಪರತಾಃ ಅಶಾನ್ತದರ್ಪಾಃ ಪ್ರಯತ್ನಂ ಕುರ್ವನ್ತೋऽಪಿ ನೈನಂ ಪಶ್ಯನ್ತಿ ಅಚೇತಸಃ ಅವಿವೇಕಿನಃ'' (ಗೀ. ಭಾ. 15–11, ಭಾ.ಭಾ.. 909) ಎಂದಿದ್ದಾರೆ. ''ಅಂತಃಕರಣದಲ್ಲಿ ಅಮಾನಿತ್ವಾದಿ ಸಾಧನೆಗಳಿಲ್ಲದವರು, ತಪಸ್ಸು ಹಾಗೂ ಇಂದ್ರಿಯಗಳ ಜಯವಿಲ್ಲದೆ ಇರುವವರು, ಕೆಟ್ಟನಡತೆಗಳನ್ನು ಬಿಡದೆ ಇರುವವರು, ದರ್ಪವನ್ನು ಬಿಟ್ಟು ಶಾಂತರಾಗದವರು; ಶಾಸ್ತ್ರ, ಗುರುಗಳು ಎಂಬ ಪ್ರಮಾಣಗಳಿಂದ ಶ್ರವಣಮನನಗಳನ್ನು ಮಾಡುತ್ತಿದ್ದರೂ ಆತ್ಮವಿಜ್ಞಾನಕ್ಕೆ ಪ್ರಯತ್ನಿಸುತ್ತಿದ್ದರೂ ಸಹ ಈ ಅವಿವೇಕಿಗಳು ಆತ್ಮವಿಜ್ಞಾನವನ್ನು ಪಡೆಯಲಾರರು'' ಎಂಬುದು ಈ ವಾಕ್ಯದ ತಾತ್ಪರ್ಯವು. ಆದ್ದರಿಂದ ಪರಂಪರಾ ಹಾಗೂ ಸಹಕಾರಿ ಸಾಧನಸಂಪನ್ನರಿಗೇ ಈ ಸಾಕ್ಷಾತ್ ಸಾಧನೆಗಳು ಪ್ರಯೋಜನವನ್ನು ಎಂದರೆ ಅದ್ವಿತೀಯ ಆತ್ಮಜ್ಞಾನ ನಿಷ್ಠೆಯನ್ನು ತಂದುಕೊಡುತ್ತವೆ.

## ಪ್ರಕೃತ ವಿಚಾರ

ನಾನು 1964ರಲ್ಲಿ ''ಅಧ್ಯಾತ್ಮಯೋಗ'' ಎಂಬ ಒಂದು ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸಿದ್ದೆ. ಅದು ಪುನಃ ಮೂರು ಸಲ ಕನ್ನಡದಲ್ಲಿ, ನಾಲ್ಕು ಸಲ ತೆಲುಗಿನಲ್ಲಿ ಪ್ರಕಟವಾಯಿತು. ಈಗ ಆ ಸಣ್ಣ ಪುಸ್ತಕದೊಂದಿಗೆ ಸಾಕ್ಷಾತ್ ಸಾಧನಗಳಾದ ಶ್ರವಣ ಮನನಗಳನ್ನು ಸೇರಿಸಿ ಒಟ್ಟಿಗೇ ಒಂದು ಹೊಸ ಪುಸ್ತಕವನ್ನಾಗಿ ಪ್ರಕಟಿಸುವ ಯೋಗ ಒದಗಿಬಂದಿರುವುದು ಸದ್ಗುರುಗಳ ಕೃಪಾಕಟಾಕ್ಷವೇ ಆಗಿದೆ.

ತತ್ತ್ವಜಿಜ್ಞಾಸುಗಳಿಗೆ ಈ ಚಿಕ್ಕ ಪುಸ್ತಕದಿಂದ ಸ್ವಲ್ಪಮಟ್ಟಿಗೆ ಮಾರ್ಗ ದರ್ಶನವಾದರೆ ನಾನು ಧನ್ಯನೆಂದುಕೊಳ್ಳುತ್ತೇನೆ. ಈ ಸಾಧನೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಬಯಸುವವರು ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ದೊರಕುವ ''ಶಾಂಕರವೇದಾಂತಸೌರಭ'' ಎಂಬ ಗ್ರಂಥವನ್ನು ನೋಡಬಹುದು.

ಸದ್ಗುರು ಪಾದರೇಣು
ದೇವರಾಯ ಕುಲಕರ್ಣಿ
(ಹೊಂಬಳ) ಬೆಂಗಳೂರು

ನಂ. 124, ಸುಮುಖ
5ನೇ ಮುಖ್ಯರಸ್ತೆ, ಪೂರ್ಣಪ್ರಜ್ಞಾ ಲೇಔಟ್,
ಬನಶಂಕರಿ 3ನೇ ಘಟ್ಟ
ಬೆಂಗಳೂರು– 85

# ಪ್ರಕಾಶಕರ ಬಿನ್ನಹ

ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳ ಬೋಧನೆಯನ್ನು ಪ್ರಚಾರಮಾಡುವ ಮುಖ್ಯ ಗುರಿಯನ್ನುಳ್ಳದ್ದಾಗಿದೆ.

ಶ್ರೀ ಶ್ರೀಗಳವರ ಸಾಕ್ಷಾತ್ ಶಿಷ್ಯರಲ್ಲೊಬ್ಬರಾದ ಶ್ರೀ ದೇವರಾಯ ಕುಲಕರ್ಣಿ (ಹೊಂಬಳ) ಬೆಂಗಳೂರು ಇವರು ಈವರೆಗೆ ಅನೇಕ ಗ್ರಂಥಗಳನ್ನು ಶ್ರೀಶ್ರೀಗಳವರ ಬೋಧನಾಪದ್ಧತಿಯನ್ನನುಸರಿಸಿ ಬರೆದು ಕೆಲವು ಗ್ರಂಥಗಳನ್ನು ಕಾರ್ಯಾಲಯಕ್ಕೆ ಸಮರ್ಪಿಸಿದ ಸದ್ಗುರುಭಕ್ತರಾಗಿದ್ದಾರೆ. ಇಂಥ ಮಹನೀಯ ರಿಂದ ಈ ಸಲ ಈ ಗ್ರಂಥವು ಹೊರಬರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ರೀ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿರುವ ವಿಷಯಗಳನ್ನೇ ನೇರವಾಗಿ ಶ್ರೀಶಂಕರರ ವಾಕ್ಯಗಳಿಂದಲೇ ಜಿಜ್ಞಾಸುಗಳಿಗೆ ತಿಳಿಸಿಕೊಡುವ ಪದ್ಧತಿಯನ್ನು ಪ್ರಪ್ರಥಮವಾಗಿ ಶ್ರೀಶ್ರೀಗಳವರು ''ಶಾಂಕರವೇದಾಂತಸಾರ'' ಎಂಬ ಗ್ರಂಥದ ಮೂಲಕ ತೋರಸಿಕೊಟ್ಟರು. ಶ್ರೀಶ್ರೀಗಳವರ ದಿಗ್ದರ್ಶನದಂತೆ ಅವರ ಹೆಜ್ಜೆಗಳಲ್ಲಿಯೇ ಹೆಜ್ಜೆಗಳನ್ನಿಟ್ಟು ನಡೆಯುವ ಮೂಲಕ ಶ್ರೀ ದೇವರಾಯರು ಶ್ರೀಶ್ರೀಗಳವರ ಸಂಪ್ರದಾಯದಲ್ಲಿ ಒಂದು ಮುಖ್ಯ ಸ್ಥಾನವನ್ನು ಪಡೆದಿದ್ದಾರೆ.

ಈಗ ಬಂದಿರುವ ಈ ಗ್ರಂಥವು ಉತ್ತಮ ಜಿಜ್ಞಾಸುಗಳಿಗೆ ಆತ್ಮವಿಜ್ಞಾನವನ್ನು ಸಂಪಾದಿಸಲು ಕೈದೀವಿಗೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ''ಶಂಕರಸಂಸ್ಮರಣ'', 'ಶಂಕರದರ್ಶನ'' (ಬ್ರಹ್ಮಜ್ಞವಚನ), ''**ಶಾಂಕರವೇದಾಂತಸೌರಭ**'' ಮೊದಲಾದ ಗ್ರಂಥಗಳನ್ನು ಕಾರ್ಯಾಲಯಕ್ಕೇ ಸಮರ್ಪಿಸಿರುವಂತೆ ಈ ಗ್ರಂಥದ ಸಂಪೂರ್ಣ ಹಕ್ಕುಬಾಧ್ಯತೆಗಳನ್ನೂ ಸಹ ಕಾರ್ಯಾಲಯಕ್ಕೇ ಶ್ರೀ ದೇವರಾಯರು ಸಮರ್ಪಿಸಿದ್ದಾರೆ. ಈ ಮಹನೀಯರ ತ್ಯಾಗ , ಗುರುಭಕ್ತಿಗಳು ಶ್ಲಾಘನೀಯವಾಗಿವೆ. ಕಾರ್ಯಾಲಯವು ಇವರ ಈ ಉಪಕಾರವನ್ನು ಸ್ಮರಿಸುವುದಲ್ಲದೆ ಇವರಿಂದ ಇನ್ನೂ ಹೆಚ್ಚಿನ ಸದ್ಗುರು ಸೇವೆ ನಡೆಯಲೆಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥಿಸುತ್ತೇವೆ.

ಇನ್ನು ಗ್ರಂಥವು ಹೊರಬರಲು ಧನಸಹಾಯವನ್ನು ಮಾಡಿದ ಶ್ರೀ

ಜಿ. ವಿ. ಶ್ರೀನಿವಾಸಯ್ಯ ಜಯನಗರ, ಬೆಂಗಳೂರು ಹಾಗೂ ಶ್ರೀ ರಾಜ್‌ಕಮಲ್ ಪ್ರೆಸ್‌ನವರಾದ ಶ್ರೀ ಕೆ.ಎನ್. ನರಸಿಂಗರಾಯರಿಬ್ಬರೂ ನಿಸ್ವಾರ್ಥ ಬುದ್ಧಿಯಿಂದ ಶ್ರೀ ಸದ್ಗುರು ಸೇವೆಯನ್ನು ಮಾಡಿದ ಉದಾರದಾನಿಗಳಾಗಿದ್ದಾರೆ. ಇವರಿಗೂ ಸಹ ಶ್ರೀಸದ್ಗುರುವು ಸಂಪೂರ್ಣವಾದ ಆಯುರಾರೋಗ್ಯಭಾಗ್ಯಗಳನ್ನೂ ಆತ್ಮ ವಿಜ್ಞಾನನಿಷ್ಠೆಯನ್ನೂ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಕಾರ್ಯಾಲಯದಲ್ಲಿ ಸದ್ಗುರುಸೇವೆ ನೆರವೇರಿಸುತ್ತಿರುವ ಶ್ರೀ ಹೆಚ್. ವೆಂಕಟನರಸಪ್ಪನವರು ಈ ಗ್ರಂಥ ಹೊರಬರಲು ತುಂಬಾ ಶ್ರಮಪಟ್ಟಿದ್ದಾರೆ. ಶ್ರೀ ದೇವರಾಯರು ಬರೆದ ಕೈಬರಹದ ಪ್ರತಿಯನ್ನು ಪುನಃ ತಿದ್ದಿ ಬರೆಯುವುದು, ಅಚ್ಚಿನ ಕರಡನ್ನು ತಿದ್ದುವುದು, ಸೂಕ್ತಸಲಹೆಗಳನ್ನು ಕೊಟ್ಟು ಗ್ರಂಥವು ಪರಿಪೂರ್ಣವಾಗುವಂತೆ ಮಾಡುವುದು ಮುಂತಾಗಿ ಬಹುವಿಧದಿಂದ ಸದ್ಗುರು ಸೇವೆಮಾಡಿದ್ದಾರೆ. ಈ ಸದ್ಗುರು ಭಕ್ತರಿಗೂ ಇತೋಪ್ಯತಿಶಯವಾದ ಆಯುರಾರೋಗ್ಯಭಾಗ್ಯಗಳನ್ನೂ ಆತ್ಮಜ್ಞಾನ ನಿಷ್ಠೆಯನ್ನೂ ಶ್ರೀಸದ್ಗುರುವು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಅಂದವಾಗಿಯೂ ವಿಳಂಬವಿಲ್ಲದೆಯೂ ಈ ಗ್ರಂಥವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ 'ರಾಜ್‌ಕಮಲ್ ಪ್ರೆಸ್ಸ್'ನ ಮಾಲೀಕರು ಹಾಗೂ ಸಿಬ್ಬಂದಿ ವರ್ಗಕ್ಕೂ ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಹೇಳಲೇಬೇಕಾಗಿದೆ.

ಒಟ್ಟಿನಲ್ಲಿ ಕನ್ನಡನಾಡಿನ ಜಿಜ್ಞಾಸುಗಳು ಈ ಗ್ರಂಥವನ್ನು ಪ್ರೀತ್ಯಾದರ ಗಳಿಂದ ಬರಮಾಡಿಕೊಂಡು ಇದರ ಲಾಭವನ್ನು ಪಡೆಯುವಂತಾಗಲೆಂದು ಹಾರೈಸುತ್ತೇವೆ.

ಪ್ರಕಾಶಕರು

ತಾ॥ 10.6.1991 ಕೆ.ಜಿ. ಸುಬ್ರಾಯಶರ್ಮ

## ಎರಡನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ

ಮೊದಲನೆಯ ಮುದ್ರಣದ ಪ್ರತಿಗಳೆಲ್ಲಾ ಮಾರಾಟವಾಗಿ ಬಿಟ್ಟಿದ್ದರಿಂದ, ಮುದ್ರಣದ ತಪ್ಪುಗಳನ್ನೆಲ್ಲಾ ತಿದ್ದಿ ಗ್ರಂಥಶರೀರದಲ್ಲಿ ಯಾವ ಬದಲಾವಣೆಯೂ ಇಲ್ಲದೆ ಎರಡನೆಯ ಬಾರಿಗೆ ಈ ಪುಸ್ತಕವನ್ನು ಹೊರತರಲಾಗಿದೆ. ಹೆಚ್ಚಿನ ವಿವರಗಳನ್ನು ಬಯಸುವವರು ಈ ಗ್ರಂಥಕರ್ತೃರ 'ಶಾಂಕರವೇದಾಂತಸೌರಭ' ಮತ್ತು 'ಶಾಂಕರಸಂಸ್ಮರಣ' ಎಂಬ ಗ್ರಂಥಗಳನ್ನು ನೋಡಬಹುದು. .

ತಾ॥ 25–4–2010 ಪ್ರಕಾಶಕರು

# ಶ್ರವಣ

ಬೃಹದಾರಣ್ಯಕ ಉಪನಿಷತ್ತಿನಲ್ಲಿ (2–4–5) ಯಾಜ್ಞವಲ್ಕ್ಯ ಮಹರ್ಷಿಗಳು ತಮ್ಮ ಪತ್ನಿಯಾದ ಮೈತ್ರೇಯಿಯನ್ನು ಕುರಿತು ಬೋಧಿಸುವಾಗ "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಎಂದು ಹೇಳಿದ ಈ ಮಂತ್ರದಲ್ಲಿ ಆತ್ಮತತ್ತ್ವವನ್ನು ಕಂಡುಕೊಳ್ಳಲು ಶ್ರವಣ, ಮನನ, ನಿದಿಧ್ಯಾಸನಗಳು ಸಾಧನೆಗಳು ಎಂದು ಹೇಳಿದ್ದಾರೆ.

"ಸಾಕ್ಷಾದೇವ ಚ ಕಾರಣತ್ವಾತ್ ಶ್ರವಣಮನನನಿದಿಧ್ಯಾಸನಾನಾಮ್" (ತೈ. 1ನೇ ವಲ್ಲಿ ಉಪಸಂಹಾರ ಭಾಷ್ಯ, ಭಾ. ಭಾ. 85) ಎಂದು ಶ್ರೀಶಂಕರ ಭಗವತ್ಪಾದರು ಅಪ್ಪಣೆ ಕೊಡಿಸಿದ್ದಾರೆ. ಶ್ರವಣ, ಮನನ, ನಿದಿಧ್ಯಾಸನಗಳು ಆತ್ಮತತ್ತ್ವವನ್ನು ಕಂಡುಕೊಳ್ಳಲು ಸಾಕ್ಷಾತ್ ಎಂದರೆ ನೇರಾದ ಸಾಧನೆಗಳು ಎಂಬುದು ಇದರ ತಾತ್ಪರ್ಯವು. ಶ್ರವಣಮಾತ್ರದಿಂದಲೇ ಉತ್ತಮಾಧಿಕಾರಿಗೆ ಆತ್ಮತತ್ತ್ವದಲ್ಲಿ ನೆಲೆನಿಲ್ಲುವಿಕೆಯು ಬಂದುಬಿಡುತ್ತದೆ. ಶ್ರವಣದ ಜೊತೆಗೇ ಅವನಿಗೆ ಮನನ (ಯುಕ್ತಿಯಿಂದ ಅನುಭವಕ್ಕೆ ಹೊಂದಿಸಿಕೊಳ್ಳುವುದು), ನಿದಿಧ್ಯಾಸನ (ಏಕಾಗ್ರತೆಯಿಂದ ತತ್ತ್ವವನ್ನು ಅನುಭವದಲ್ಲಿ ಕಂಡುಕೊಂಡು ನಿಶ್ಚಯಿಸಿಕೊಳ್ಳುವುದು) ಎಂಬ ಸಾಧನೆಗಳೂ ಸಹ ಮುಗಿದುಹೋಗಿರುತ್ತವೆ. ಅಂಥ ಅಧಿಕಾರಿಗೆ ಪ್ರತ್ಯೇಕವಾಗಿ ಶ್ರವಣವಾದ ಬಳಿಕ ಮನನನಿದಿ ಧ್ಯಾಸನಗಳನ್ನು ಪ್ರತ್ಯೇಕವಾಗಿ ಮಾಡಬೇಕಾದದ್ದು ಉಳಿಯುವುದಿಲ್ಲ. "ಯೇಷಾಂ ಪುನರ್ನಿಪುಣಮತೀನಾಂ ನಾಜ್ಞಾನಸಂಶಯವಿಪರ್ಯಯ ಲಕ್ಷಣಃ ಪದಾರ್ಥವಿಷಯಃ ಪ್ರತಿಬನ್ಧೋಽಸ್ತಿ, ತೇ ಶಕ್ನುವಂತಿ ಸಕೃದುಕ್ತಮೇವ ತತ್ತ್ವಮಸಿವಾಕ್ಯಾರ್ಥಮ್ ಅನುಭವಿತಮ್" (ಸೂ.ಭಾ. 4–1–2) ಎಂಬ ವಾಕ್ಯದಲ್ಲಿ ಶ್ರೀಶಂಕರರು "ಯಾರಿಗೆ ಅಜ್ಞಾನ, ವಿಪರೀತಜ್ಞಾನ, ಸಂಶಯಗಳು ತತ್–ತ್ವಂ–ಅಸಿ ಎಂಬ ಪದಗಳ ಅರ್ಥದ ಬಗ್ಗೆ ಪ್ರತಿಬಂಧವು ಇರುವುದಿಲ್ಲವೋ ಅವರು ಒಂದೇ ಸಲ ಹೇಳಿದರೂ ತತ್ತ್ವವನ್ನು ಅನುಭವದಲ್ಲಿ ಕಂಡುಕೊಳ್ಳಲು

ಸಮರ್ಥರಾಗಿರುತ್ತಾರೆ'' ಎಂಬ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ. ಆದ್ದರಿಂದ ನಾನೆಂಬ ಅನಿಸುವಿಕೆಯ ಹಿಂದೆ ಇರುವ ನಿಜವಾದ ತಾನಾಗಿರುವ ತತ್ತ್ವದ ಕಡೆಗೆ ಜಿಜ್ಞಾಸುವಿನ ಲಕ್ಷ್ಯವನ್ನು ತಿರುಗಿಸುವುದೊಂದೇ ಈ ಸಾಕ್ಷಾತ್‌ಸಾಧನೆಗಳ ಕೆಲಸವೇ ಹೊರತು ಯಾವುದಾದರೊಂದು ಕರ್ಮ, ಉಪಾಸನೆ ಮುಂತಾದವುಗಳಲ್ಲಿ ಹೇಳಿದಂತೆ 'ಇದಾದ ಬಳಿಕ ಇದನ್ನು ಮಾಡಬೇಕು' ಎಂಬ ಬಗೆಯ ವಿಧಿಯನ್ನು ಹೇಳುವ ಉದ್ದೇಶವು ಇರುವುದಿಲ್ಲ. ಈ ಕಾರಣದಿಂದಲೇ ಶ್ರವಣವಾದ ಬಳಿಕ ಮನನ, ನಿದಿಧ್ಯಾಸನಗಳನ್ನೂ ವಿಧಿಸಿದೆಯಲ್ಲವೇ ? ಎಂಬ ಪ್ರಶ್ನೆಗೆ ಆಚಾರ್ಯರು ಸೂ.ಭಾ. (1–1–4, ಭಾ.ಭಾ. 61) ''ಮನನನಿದಿಧ್ಯಾಸನಯೋರಪಿ ಶ್ರವಣವತ್ ಅವಗತ್ಯರ್ಥತ್ವಾತ್'' ಎಂದಿದ್ದಾರೆ. ಶ್ರವಣದಂತೆಯೇ ಮನನನಿದಿಧ್ಯಾಸನಗಳೂ ಸಹ ಆತ್ಮತತ್ತ್ವವನ್ನು ಅನುಭವದಲ್ಲಿ ಕಂಡುಕೊಳ್ಳುವುದಕ್ಕಾಗಿಯೇ ಹೇಳಿದೆ ಎಂಬುದು ಇದರ ತಾತ್ಪರ್ಯವು. ಇದರಿಂದ ಏರ್ಪಡುವುದೇನೆಂದರೆ ಕೇವಲ ಶ್ರವಣಮಾತ್ರದಿಂದಲೇ ಆತ್ಮಾನುಭವದಲ್ಲಿನೆಲೆನಿಲ್ಲಬಹುದು. ಆದಾಗದಿದ್ದಲ್ಲಿ ಶ್ರವಣಮನನಗಳೆರಡನ್ನೂ ಉಪಯೋಗಿಸಬೇಕು. ಆಗಲೂ ಆತ್ಮಾನುಭವದಲ್ಲಿ ನೆಲೆನಿಲ್ಲುವಿಕೆಯು ಬಾರದಿದ್ದರೆ ನಿದಿಧ್ಯಾಸವನ್ನು ಉಪಯೋಗಿಸಿಕೊಳ್ಳಬೇಕು ಎಂಬುದು ಆಚಾರ್ಯರ ಅಭಿಪ್ರಾಯ. ಹೀಗೆ ಶ್ರವಣ–ಮನನ– ನಿದಿಧ್ಯಾಸನಗಳು ವಸ್ತುತಂತ್ರ ಸಾಧನೆಗಳಾಗಿದ್ದು ಏಕಾಗ್ರತೆಯಿಂದ ಶಾಸ್ತ್ರವೂ ಗುರುಗಳೂ ಬೋಧಿಸಿದ್ದನ್ನು ಜಿಜ್ಞಾಸುವು ತನ್ನ ಅನುಭವದಲ್ಲಿ ಕಂಡುಕೊಂಡು ಹಾಗಿರುವುದನ್ನು ನಿಶ್ಚಸಿಕೊಳ್ಳಬೇಕಾದ ಸಾಧನೆಗಳಾಗಿವೆ. ಶಾಸ್ತ್ರದ ಮಾತಿನಲ್ಲಿ ಕೇವಲ ಶ್ರದ್ಧೆಯನ್ನು ಮಾತ್ರ ಇಟ್ಟುಕೊಂಡು ಅದರಂತೆ ಆಚರಿಸಬೇಕಾದ ಕರ್ಮ– ಉಪಾಸನೆ ಮೊದಲಾದ ಸಾಧನೆಗಳಂತೆ ಇವು ಕರ್ತೃತಂತ್ರ ಸಾಧನೆಗಳಲ್ಲ. ಶ್ರವಣಾದಿಗಳಿಗೆ ಶ್ರದ್ಧೆ ಬೇಕಾಗಿದ್ದರೂ ಆತ್ಮತತ್ತ್ವವು ಕೇವಲಶ್ರದ್ಧಾಮಾತ್ರ ಗಮ್ಯವಾದ ಸ್ವರ್ಗಾದಿಗಳಂತೆ ಅಲ್ಲ. ಈಗಲೇ ಇಲ್ಲಿಯೇ ತತ್ತ್ವವು ಅನುಭವಗೋಚರವಾಗಬೇಕಾದ ವಸ್ತುತಂತ್ರಜ್ಞಾನಕ್ಕೇ ಈ ಸಾಧನೆಗಳು ಸೇರಿರುತ್ತವೆ. ಈಗ ಶ್ರವಣದ ಸ್ವರೂಪವನ್ನು ಕುರಿತು ತಿಳಿಯಲೆತ್ನಿಸೋಣ.

# ಶ್ರವಣದ ಸ್ವರೂಪ

## ವೇದಾಂತೇತರ ಶಾಸ್ತ್ರಗಳ ಪರಿಧಿ

ವ್ಯವಹಾರದಲ್ಲಿ ನಮ್ಮೆಲ್ಲರಿಗೂ ನಮ್ಮದೇ ಆಗಿರುವ ಶರೀರ, ಪ್ರಾಣಗಳು, ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ, ಸುಖ ದುಃಖಗಳೇ ಮೊದಲಾದ ವೇದನೆಗಳು ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿ ಇದ್ದುಬಿಟ್ಟಿವೆ. ನಾವು ವ್ಯವಹಾರ ಮಾಡುವಾಗ ''ನಾನು'' ಎಂದು ಹೇಳಿಕೊಳ್ಳುವೆವಷ್ಟೇ ? ಹೀಗೆ ಹೇಳುವಾಗ ಶರೀರವನ್ನು 'ನಾನು' ಎಂದಿಟ್ಟು ಕೊಂಡಿರುತ್ತೇವೆ. ಮಿಕ್ಕ ಪ್ರಾಣ – ಮೊದಲಾದ ಕರ್ಮೇಂದ್ರಿಯಗಳು, ಕಣ್ಣು, ಕಿವಿ ಮೊದಲಾದವುಗಳನ್ನು 'ನನ್ನವು' ಎಂದಿಟ್ಟುಕೊಂಡಿರುತ್ತೇವೆ. ಹೀಗೆ ಈ ಒಟ್ಟು ಸಂಘಾತ (ಮುದ್ದೆ) ವನ್ನೇ 'ನಾನು' ಎಂದುಕೊಳ್ಳುತ್ತಿರುತ್ತೇವೆ.

ವೇದಾಂತಶಾಸ್ತ್ರವೊಂದನ್ನುಳಿದು ಮಿಕ್ಕ ಶಾಸ್ತ್ರಗಳೆಲ್ಲವೂ ಈ ಮೇಲೆ ವರ್ಣಿಸಿದ 'ನಾನು' ಇಂಥವನು (ಳು) ಎಂಬುದನ್ನೇ ಪ್ರಧಾನವಾಗಿ ಹಿಡಿದು ''ಇಂಥ ನೀನು ಸುಖವಾಗಿರಬೇಕಾದರೆ ಹೀಗೆ ಹೀಗೆ ಮಾಡು. ಆದರಿಂದ ಇಂಥಿಂಥ ಫಲಗಳು ಬರುತ್ತವೆ'' ಎಂಬುದನ್ನೇ ತಿಳಿಸುತ್ತವೆ. ಎಲ್ಲ ಲೌಕಿಕಶಾಸ್ತ್ರಗಳು; ಧರ್ಮ, ದೇವರು, ಸ್ವರ್ಗಾದಿಗಳು ಮುಂತಾದವುಗಳನ್ನು ಕುರಿತು ವಿಧವಿಧವಾಗಿ ಹೇಳುವ ವೇದ–ಕುರಾನ್–ಬೈಬಲ್–ಮೊದಲಾದ ಶಾಸ್ತ್ರಗಳು; ಉಪಾಸನಾದಿಗಳಿಂದಲೂ, ಯೋಗಸಾಧನೆಗಳಿಂದಲೂ ಅದ್ಭುತವಾದ ಫಲಗಳನ್ನೂ ಹಾಗೂ ಪರಲೋಕಗತಿಗಳನ್ನೂ ಕುರಿತು ಹೇಳುವ ಶಾಸ್ತ್ರಗಳು. ಅಣಿಮಾದಿಸಿದ್ಧಿಗಳ ಪ್ರಾಪ್ತಿ, ದೇವತಾಸಾಕ್ಷಾತ್ಕಾರ, ದಿವ್ಯಪವಾಡಗಳ ಪ್ರಾಪ್ತಿಯೇ ಮೊದಲಾದದ್ದನ್ನು ಬೋಧಿಸುವ ಶಾಸ್ತ್ರಗಳು ಸಹ ಈ ಮೊದಲು ಹೇಳಿದ ''ನಾನು ಇಂಥವನು'' ಎಂಬುದನ್ನೇ ಪ್ರಧಾನವಾಗಿಹಿಡಿದು ತಮ್ಮ ತಮ್ಮ ವಿಷಯಗಳನ್ನು ಬೋಧಿಸುತ್ತಿರುತ್ತವೆ. ಹೀಗಿರುವುದರಿಂದ ಈ ಶಾಸ್ತ್ರಗಳೆಲ್ಲವೂ ಹೇಳತಕ್ಕ ವಿಷಯಗಳು ಕಾಲ– ದೇಶ– ಕಾರ್ಯಕಾರಣಭಾವಗಳಿಗೆ ಕಟ್ಟುಬಿದ್ದಿರುತ್ತವೆ. ನಾನು ಏನನ್ನೋ ಮಾಡಿ ಏನನ್ನೋ ಪಡೆಯಬೇಕೆಂಬ ತವಕವುಳ್ಳವರಿಗೆ ಇವು ಪ್ರಯೋಜನಕಾರಿಗಳಾಗಿಯೇ ಇವೆ.

## ವೇದಾಂತಶಾಸ್ತ್ರದ ವೈಶಿಷ್ಟ್ಯ

'ನಾನು ಇಂಥವನು' ಎಂಬುದನ್ನು ಪ್ರಧಾನವಾಗಿ ಹಿಡಿದು ಹೊರಟಿರುವ ಸಕಲಶಾಸ್ತ್ರಗಳ ಎಲ್ಲೆಕಟ್ಟನ್ನು ಈವರೆಗೆ ತೋರಿಸಲಾಗಿದೆ. ಈಗ ವೇದಾಂತದ ಬೋಧನೆ ಏನೆಂದರೆ : ಹೀಗೆ ಸಾಧ್ಯಸಾಧನರೂಪವಾದ ಎಂದರೆ ಮಾಡಿ ಪಡೆಯುವದೆಂಬ ಎಲ್ಲವೂ ಅನಿತ್ಯವೇ ಆಗಿರುವುದೆಂಬುದನ್ನು ಜಿಜ್ಞಾಸುವು ಮನಗಂಡು ''ನಿರ್ವೇದಮಾಯಾತ್ ನಾಸ್ತಿ ಅಕೃತಃ ಕೃತೇನ'' (ಮುಂ. 1–2–12) ಮಾಡಿ ಪಡೆದದ್ದು ನಿತ್ಯವಲ್ಲ ಎಂದು ಅದರಲ್ಲಿ ವಿರಕ್ತನಾಗಿ ಇರಬೇಕು, ಹಾಗೂ ನಿತ್ಯವಾದದ್ದು ಮಾಡಿ ಪಡೆಯುವುದರಿಂದ ಸಿಕ್ಕುವುದಿಲ್ಲ ಎಂಬಂತೆ ಪರಮತತ್ತ್ವವನ್ನೇ ಕಂಡುಕೊಳ್ಳುವ ಗುರಿಯನ್ನು ಜೀವನಕ್ಕೆ ಇಟ್ಟುಕೊಂಡಿರಬೇಕು. ಇಂಥ ಅಧಿಕಾರಿಗೆ ಪರಮತತ್ತ್ವವಾದ ಆತ್ಮಸ್ವರೂಪ ವನ್ನು ಬೋಧಿಸಲಾಗುತ್ತದೆ. ಆ ಬೋಧನೆಯ ಸ್ವರೂಪವೇನೆಂದರೆ –

ಮೇಲೆ ವರ್ಣಿಸಿದ ''ನಾನು ಇಂಥವನು(ಳು)'' ಎಂಬ ಅನಿಸುವಿಕೆಗೆ ವೇದಾಂತದಲ್ಲಿ ''ಅಹಂಪ್ರತ್ಯಯ''ಎಂದು ಕರೆಯುತ್ತಾರೆ. ಇದೇ (Me-notion) ತಾನು ಎಂದು ಪ್ರತಿಯೊಬ್ಬನೂ ಸಹಜವಾಗಿ ತಿಳಿದುಕೊಂಡಿರುತ್ತಾನೆ. ಆದರೆ ಇದು ತಾನಲ್ಲ ಎಂದು ವೇದಾಂತವು ಉಪದೇಶಿಸುತ್ತದೆ. ನೀನು ಈ ಅಹಂಪ್ರತ್ಯಯವಲ್ಲ. ಇದು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುತ್ತಾ ಇದರ ಸೋಂಕೇ ಇಲ್ಲದಿರುವ ಈ ಅಹಂಪ್ರತ್ಯಯಕ್ಕೂ ಸಾಕ್ಷಿಯಾಗಿರುವ ಕೇವಲ ಚಿನ್ಮಾತ್ರಸ್ವರೂಪವೇ ನೀನು. ಅದೇ ನಿಜವಾದ ತಾನು, ನಾನು ಎಂದು ಕೊಳ್ಳಲು ಆ ತತ್ತ್ವವೇ ಯೋಗ್ಯವಾಗಿದೆ. ಈ ಸಂಗತಿಯನ್ನು ನಿನ್ನ ಸ್ವಂತ ಅನುಭವ ದಿಂದ ಕಂಡುಕೋ. ಇದು ಶಾಸ್ತ್ರವು ಹೇಳುವದಾದ್ದರಿಂದ ಒಪ್ಪ ಬೇಕಾಗಿದೆ ಎಂದು ನಂಬಬೇಕಾಗಿಲ್ಲ. ಇದು ಬರೀ ನಂಬಿಕೆಯ ವಿಷಯವಲ್ಲ. ಬುದ್ಧಿ ಮನಸ್ಸು, ಇಂದ್ರಿಯಗಳನ್ನು ಉಪಯೋಗಿಸಿ ಹೊರಗಿನ ವಸ್ತುಗಳನ್ನು ಕಂಡು ಕೊಳ್ಳುವಂತೆಯೂ ಅಲ್ಲ. ''ಹೀಗಿರುವುದರಿಂದ ಹೀಗಿರಬೇಕು''– ಉದಾಹರಣೆಗೆ ಹೊಗೆ ಕಾಣುವುದರಿಂದ ಬೆಂಕಿಯು ಅಲ್ಲಿರಬೇಕು– ಎಂಬ ಅನುಮಾನ ದಿಂದಲೂ ತರ್ಕದಿಂದಲೂ ಕಂಡುಕೊಳ್ಳತಕ್ಕದ್ದಲ್ಲ. ಪತಂಜಲ

ಯೋಗಾದಿಗಳಲ್ಲಿ ಹೇಳಿದಂತೆ ಸಾಧನೆಮಾಡಿ ಅಸಂಪ್ರಜ್ಞಾತಸಮಾಧಿಯೇ ಮೊದಲಾದ ವಿಲಕ್ಷಣ ಅವಸ್ಥೆಗಳ ಅನುಭವವನ್ನು ಪಡೆದ ಬಳಿಕವೇ ಗೊತ್ತಾಗಬೇಕಾದ ತತ್ತ್ವವೂ ಅಲ್ಲ. ಇನ್ನು ಭೌತಿಕವಿಜ್ಞಾನದಿಂದಾಗಲಿ (Material Science) ಮಾನಸವಿಜ್ಞಾನದಿಂದಾಗಲೀ (Phsychology) ತಿಳಿದುಕೊಳ್ಳುವ ಸಂಗತಿಯಂತೂ ಅಲ್ಲವೇ ಅಲ್ಲ. ಏಕೆಂದರೆ ಈ ನಿಜವಾದ ತಾನಾಗಿರುವ ನಿನ್ನ ಸ್ವರೂಪವು ಇಂದ್ರಿಯಗಳನ್ನೂ ಮನಸ್ಸನ್ನೂ (ಅಂತಃಕರಣವನ್ನೂ) ಮೀರಿರುವ ನಿನ್ನ ಸಹಜವಾದ ಇರುವಿಕೆಯಾಗಿದೆ. ಇಂಥ ಈ ಬರೀ ಇರವಿನ, ಬರೀ ಅರಿವಿನ ಸ್ವರೂಪವನ್ನು ಈಗ ನೀನು ತಪ್ಪಾಗಿ ತಿಳಿದುಕೊಂಡಿರುವ "ನಾನು ಇಂಥವನು (ಳು)" ಎಂಬ ಅನಿಸುವಿಕೆಯ ದೃಷ್ಟಿಯಿಂದ "ಸಾಕ್ಷಿ" ಎಂದು ವೇದಾಂತದಲ್ಲಿ ಕರೆದಿದೆ. ಈ ಸಾಕ್ಷಿಸ್ವರೂಪವನ್ನು ತಿಳಿಸುವ ಶಾಸ್ತ್ರವು ವೇದಾಂತ ಅಥವಾ ಉಪನಿಷತ್ತುಗಳು ಮಾತ್ರವೇ ಆಗಿವೆ. ಮಿಕ್ಕ ಯಾವ ಶಾಸ್ತ್ರಗಳಿಗೂ ಈ ಸಾಕ್ಷಿಸ್ವರೂಪದ ಸುದ್ದಿಯೇ ಗೊತ್ತಾಗುವಹಾಗಿಲ್ಲ. ಏಕೆಂದರೆ ಈ ಮೊದಲು (3ನೇ ಪುಟದಲ್ಲಿ) ಹೇಳಿದಂತೆ " ನಾನು ಇಂಥವನು" ಎಂಬುದನ್ನೇ ಪ್ರಧಾನವಾಗಿ ಹಿಡಿದೇ ಎಲ್ಲಾ ಶಾಸ್ತ್ರಗಳೂ (ವೇದಾಂತ ಒಂದನ್ನುಳಿದು) ಹೊರಟಿವೆ. ಈ ಮಾತನ್ನು ಶ್ರೀಶಂಕರರು ಸೂತ್ರಭಾಷ್ಯದಲ್ಲಿ (1–1–4, ಭಾ.ಭಾ.54) **"ನ ಹಿ ಅಹಂಪ್ರತ್ಯಯ ವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ, ಏಕಃ, ಕೂಟಸ್ಥನಿತ್ಯಃ ಪುರುಷೋ ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿತ್ ಅಧಿಗತಃ ಸರ್ವಸ್ಯ ಆತ್ಮಾ"** ಎಂದು ತಿಳಿಸಿದ್ದಾರೆ. ಧರ್ಮಾಧರ್ಮಗಳನ್ನು ಬೋಧಿಸುವ ವಿಧಿಕಾಂಡದ ಲ್ಲಾಗಲಿ ಬುದ್ಧಿಯ ಪ್ರತ್ಯಯಗಳನ್ನು ಜೋಡಿಸಿ ತರ್ಕದಿಂದ ನಿರ್ಣಯಿಸುವ ತಾರ್ಕಿಕರ ಸೂತ್ರದಲ್ಲಾಗಲಿ ಈ ಸಾಕ್ಷಿ ವಿಷಯವು ತಿಳಿಯಬಂದಿರುವುದಿಲ್ಲ ಎಂಬುದು ಈ ವಾಕ್ಯದ ಅಭಿಪ್ರಾಯವು. ಹೀಗಿರುವುದರಿಂದ ಜಿಜ್ಞಾಸುವು ಶ್ರವಣಮಾಡುವ ಸಮಕಾಲದಲ್ಲಿಯೇ ತನ್ನ ಅನುಭವಕ್ಕೆ ಹೊಂದಿಸಿಕೊಂಡು ನೋಡಿ ಅನುಭವದಿಂದಲೇ ಹಾಗಿರುವುದನ್ನು ಗುರ್ತಿಸಿ ಕಂಡುಕೊಳ್ಳಬೇಕು.

## ಅನುಭವ ಎಂದರೇನು?

ನಮಗೆ ಯಾವುದೇ ಅನುಭವವು ಬರಬೇಕಾದರೆ ದೇಹ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಿರಲೇಬೇಕಲ್ಲವೇ ? ಈಗ ನೀವು ಹೇಳಹೊರಟಿರುವ ಸಾಕ್ಷಿಸ್ವರೂಪವು ಇಂದ್ರಿಯ, ಮನಸ್ಸು, ಬುದ್ಧಿಗಳಾಚೆಗೆ ತಾನೇತಾನಾಗಿದೆ ಎಂದು ಹೇಳಿದ ಬಳಿಕ ಮತ್ತೆ ಅದನ್ನು ಅನುಭವದಲ್ಲಿ ಕಂಡುಕೊಳ್ಳಬೇಕೆಂಬ ಮಾತು ಹೇಗೆ ಹೊಂದುತ್ತದೆ ? ನೀವು ಹೇಳುತ್ತಿರುವ ಅನುಭವವೆಂಬುದು ಯಾವದು ? ಎಂಬ ಪ್ರಶ್ನೆ ಬರುತ್ತದೆ. ಈ ಪ್ರಶ್ನೆಗೆ ಸಮಾಧಾನವನ್ನು ಹೇಳುವುದಕ್ಕೇ ಅನುಭವ ಎಂದರೇನು ? ಎಂಬುದನ್ನು ಈಗ ವಿವರಿಸೋಣ. ಆಗ ವೇದಾಂತದ ಉಪದೇಶವು ಸ್ಪಷ್ಟವಾಗಿ ತಿಳಿಯುತ್ತದೆ. ಈ ವಿವರಣೆ ಇಲ್ಲದೆ ಸರಿಯಾಗಿ ತಿಳಿಯಲಾರದು.

## ಎರಡು ಬಗೆಯ ಅನುಭವಗಳು

ಹೊರಗಿನ ವಸ್ತುಗಳಿಗೂ ಇಂದ್ರಿಯಗಳಿಗೂ ಸಂಬಂಧ ಬಂದಾಗ ನಮಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಹಾಗೂ ಶೀತ – ಉಷ್ಣಗಳ ಅನುಭವವಾಗುವುದು ಎಲ್ಲರಿಗೂ ತಿಳಿದ ಮಾತಾಗಿದೆ. ಪವಾಡಗಳು, ಸಿದ್ಧಿಗಳು, ಮಹಿಮೆಗಳು – ಮುಂತಾದ ಭವ್ಯಾನುಭವಗಳೂ ದಿವ್ಯಾನುಭವಗಳೂ ಉತ್ಪನ್ನವಾಗುವುದುಂಟು. ಇದರಂತೆಯೇ ಶಾಸ್ತ್ರಗಳಲ್ಲಿ ತಿಳಿಸಿರುವ ಸ್ವರ್ಗ, ನರಕ, ಕೈಲಾಸ, ವೈಕುಂಠ, ಬ್ರಹ್ಮಲೋಕ, ಪಿತೃಲೋಕ – ಮೊದಲಾದ ಲೋಕಾಂತರಗಳಲ್ಲಿ ಅನೇಕ ಬಗೆಯ ವಿಚಿತ್ರಾನುಭವಗಳೂ ಬರುವುದುಂಟೆಂದು ಕೂಡಾ ತಿಳಿದುಬರುತ್ತದೆ. ಈ ಎಲ್ಲ ಬಗೆಯ ಅದ್ಭುತ ದಿವ್ಯ – ಭವ್ಯ ಅನುಭವಗಳನ್ನೂ ಸಹ ವೇದಾಂತಶಾಸ್ತ್ರವು ''ವೇದನಾನುಭವದಲ್ಲಿ''ಯೇ ಸೇರಿಸಿಬಿಡುತ್ತದೆ. ಏಕೆಂದರೆ ಮೇಲೆ ತಿಳಿಸಿರುವ ಎಲ್ಲ ಬಗೆಯ ಅನುಭವಗಳೂ ಬಂದಿವೆ, ಬರುತ್ತವೆ ಮುಂತಾಗಿ ಹೇಳಬೇಕಾದರೆ ಈ ಮೊದಲು ಹೇಳಿದ 'ಅಹಂಪ್ರತ್ಯಯ' (Me-notion) ವೆಂಬುದಿದ್ದೇ

ಇರಬೇಕು. ಆದ್ದರಿಂದ ವೇದಾನುಭವಗಳೆಲ್ಲಕ್ಕೂ ಈ ಅಹಂಪ್ರತ್ಯಯವೇ (ನಾನು ಇಂಥವನು ಎಂಬ ಭಾವವು) ಆಧಾರವಾಗಿದೆ. ಈ ಎರಡು ಬಗೆಯ ಎಂದರೆ ಪ್ರತ್ಯಯಾನುಭವ ವೇದನಾನುಭವಗಳೆರಡೂ ಅಹಂಪ್ರತ್ಯಯದ ಕಕ್ಷೆಯಲ್ಲಿಯೇ ಇವೆ. ಇವು ಉಂಟಾಗಲು ಇಂದ್ರಿಯಗಳು, ಮನಸ್ಸು, ಬುದ್ಧಿ, ದೇಶ, ಕಾಲ, ಕಾರ್ಯಕಾರಣಭಾವಗಳು ಇದ್ದೇ ತೀರಬೇಕು. ಮತ್ತು ಇವು ಅಂತಃಕರಣದಲ್ಲಿ ಬಂದುಹೋಗುವವುಗಳೇ ಹೊರತು ಸ್ಥಿರವಾಗಿರುವವುಗಳಲ್ಲ– ಇಂಥ ಈ ಎರಡು ಬಗೆಯ ಅನುಭವಗಳಲ್ಲಿ ಯಾವುದಾದರೊಂದರ ಬಗ್ಗೆ ತಿಳಿಯಪಡಿಸುವುದೇ ವೇದಾಂತೇತರ ಶಾಸ್ತ್ರಗಳ ಗುರಿಯು. ವ್ಯವಹಾರ ದೃಷ್ಟಿ ಅಥವಾ ಲೋಕಾನುಭವದೃಷ್ಟಿಯಲ್ಲಿ ಈ ಅನುಭವಗಳೆಲ್ಲವೂ ಉಂಟಾಗುವುದು ಸತ್ಯ. ಇಂಥ ಅನುಭವಗಳೆಲ್ಲ ಸುಳ್ಳು, ಭ್ರಾಂತಿ ಎಂದೂ ಇವುಗಳಿಂದ ಏನೂ ಪ್ರಯೋಜನವಿಲ್ಲವೆಂದೂ ವೇದಾಂತವು ಹೇಳುವುದಿಲ್ಲ. ''ನಾನು ಇಂಥವನು'' ಎಂಬುದನ್ನಿಟ್ಟುಕೊಂಡಾಗ ಇವೆಲ್ಲವೂ ಸರಿ. ಈ ಅನುಭವಗಳಿಂದ ಪ್ರಯೋಜನಗಳೂ ಉಂಟಾಗುತ್ತವೆ ಎಂದೇ ವೇದಾಂತವು ಒಪ್ಪಿಕೊಳ್ಳುತ್ತದೆ.

## ಅನುಭವಸ್ವರೂಪವೇ ಆದ ಸಾಕ್ಷಿತತ್ತ್ವ

ಆದರೆ ಈವರೆಗೆ ವಿವರಿಸಿದ ಎರಡು ಬಗೆಯ ಅನುಭವಗಳನ್ನೂ ಮೀರಿದ, ತಾನೇ ಅನುಭವಸ್ವರೂಪವಾಗಿರುವ ಪ್ರತಿಯೊಬ್ಬರ ನಿಜಸ್ವರೂಪ ಎಂದರೆ ನಿಜವಾದ ಬರೀ 'ಇರವಾಗಿರುವ' ತತ್ತ್ವವೇ ಪರಮಾರ್ಥವಾದ ಆತ್ಮತತ್ತ್ವವು. ಈ ತಾನಾಗಿರುವ ಸ್ವರೂಪವು ವೇದನ ಪ್ರತ್ಯಯಾನುಭವಗಳು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುತ್ತಾ ಇವುಗಳ ಸಂಗವೇ (ಅಂಟು) ಇಲ್ಲದೆ ಇದ್ದುಬಿಟ್ಟಿದೆ. ಅದೇ ನೀನು ಎಂಬುದು ವೇದಾಂತದ ಅಸಾಧಾರಣ ಉಪದೇಶವು. ಈ ತಾನಾಗಿ ಇರುವ ಸ್ವರೂಪಕ್ಕೇ ''ಸಾಕ್ಷಿ'' ಎಂದು ಹೆಸರು. ''ಸಾಕ್ಷಾತ್ ದ್ರಷ್ಟರಿ ಸಂಜ್ಞಾಯಾಂ'' ಎಂಬ ವ್ಯಾಕರಣದ ನಿಯಮದಂತೆ ಸಕಲವೇದನ ಪ್ರತ್ಯಯಾನುಭವಗಳನ್ನು ನೇರಾಗಿ

(ಸಾಕ್ಷಾತ್ ಎಂದರೆ ಯಾವ ಸಾಧನೆಯನ್ನು ಬಯಸದೆ) ಬೆಳಗುವ ಹಾಗೂ ಈ ವೇದನ ಪ್ರತ್ಯಯಾನುಭವಗಳು ಅಡಗಿಹೋಗಿರುವುದನ್ನು ಸಹ ನೇರಾಗಿ ಬೆಳಗುತ್ತಿರುವ ಸಹಜಸ್ವರೂಪವೇ ಸಾಕ್ಷಿಸ್ವರೂಪವು. ಈ ತನ್ನ ನಿಜ ಸ್ವರೂಪದ ಕಡೆಗೆ ಜಿಜ್ಞಾಸುವು ಲಕ್ಷ್ಯವನ್ನು ಶ್ರವಣಕಾಲದಲ್ಲಿ ಹಿಂದಿರುಗಿಸ ಬೇಕು ಹಾಗೂ ಅದೇ ನಿಜವಾದ ತಾನಾಗಿರುವುದನ್ನು ಗುರುತಿಸಿಕೊಳ್ಳ ಬೇಕು. ಇದೇ ಶ್ರವಣದ ಸ್ವರೂಪವು. ಇಲ್ಲಿ ಜಿಜ್ಞಾಸುವು ಹಿಂದಿರುಗಿ ಕಂಡುಕೊಳ್ಳಲು ಮೊದಲು ಒಂದು ಕ್ರಮವನ್ನು ನೋಡೋಣ. ಆ ಕ್ರಮದಿಂದ ಇದು ಸ್ಪಷ್ಟವಾಗುವುದು. ನಮ್ಮ ಲಕ್ಷ್ಯವು ಯಾವಾಗಲೂ ಬುದ್ಧಿ ಮನಸ್ಸು, ಇಂದ್ರಿಯಗಳ ಮುಖಾಂತರ ಹೊರಗೆ ಹೋಗುತ್ತಿರುವುದು ಸ್ವಾಭಾವಿಕ. ಹೀಗೆ ಹೊರಗೆ ಹೋಗುತ್ತಿರುವ ಲಕ್ಷ್ಯವನ್ನು ಒಳಗಡೆಗೆ ಹರಿಸುತ್ತಾ ಹೋಗಬೇಕು. ಆ ಕ್ರಮವೇ ಶ್ರವಣ ಎನಿಸುವುದು. ಶ್ರವಣ ಎಂದರೆ ಬರೀ ಕೇಳುವುದಲ್ಲ. ಲಕ್ಷ್ಯವಿಟ್ಟು ಏಕಾಗ್ರತೆಯಿಂದ ಕೇಳುವುದು (Listening). ಇಷ್ಟುಮಾತ್ರವಲ್ಲದೆ ಅನುಭಾವಿಗಳು ಹೇಳುತ್ತಿರುವಂತೆಯೇ ಅದು ಹಾಗಿದೆಯೇ ಎಂಬುದನ್ನು ತಾನು ಕಂಡುಕೊಳ್ಳುತ್ತಲೇ ಹೋಗಬೇಕು (To be verified) . ಹೇಳುವವನೂ ಸಹ ಅನುಭವವನ್ನು ತೋರಿಸುತ್ತಲೇ ಜಿಜ್ಞಾಸುವನ್ನು ಹಿಂದಿರುಗುವಂತೆ ಬೋಧಿಸಬೇಕು. ಆಗ ಸಾಕ್ಷಿರೂಪವು ಅನುಭವವೇದ್ಯವಾಗುತ್ತದೆ.

## ಒಳ ಸರಿಯುವ ಕ್ರಮ

ಹೊರಗಿನ ವಸ್ತುಗಳನ್ನು ನೋಡುವಾಗ ನಾವು ಕಣ್ಣು ಮುಂತಾದ ಇಂದ್ರಿಯಗಳಲ್ಲಿ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಕಣ್ಣು ಸರಿಯಾಗಿ ಕಾಣುವುದೋ ಇಲ್ಲವೋ, ನನ್ನ ಕಿವಿ ಸರಿಯಾಗಿ ಕೇಳುವುದೋ ಇಲ್ಲವೋ, ಎಂಬುದನ್ನು ಪರೀಕ್ಷಿಸುವಾಗ ಇಂದ್ರಿಯಗಳನ್ನೇ ವಿಷಯೀಕರಿಸು ವುದರಿಂದ ಅವುಗಳಲ್ಲಿಯ ತಾದಾತ್ಮ್ಯಭಾವವನ್ನು ಬಿಟ್ಟು ಮನಸ್ಸಿನಲ್ಲಿ

ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಮನಸ್ಸು ಚಂಚಲವಾಗಿದೆ, ವ್ಯಗ್ರವಾಗಿದೆ ಮುಂತಾಗಿ ಹೇಳುವಾಗ ಮನಸ್ಸಿನಲ್ಲಿಯ ತಾದಾತ್ಮ್ಯ ಭಾವವನ್ನು ಬಿಟ್ಟು ಬುದ್ಧಿಯಲ್ಲಿ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಬುದ್ಧಿಗೆ ಈ ವಿಷಯ ತಿಳಿಯಲಿಲ್ಲ, ಈ ವಿಷಯ ತಿಳಿಯಿತು ಎಂದು ಹೇಳುವಾಗ 'ನಾನು' ಎಂಬ ಅಹಂಪ್ರತ್ಯಯದೊಂದಿಗೆ ತಾದಾತ್ಮ್ಯಭಾವ ವನ್ನು ಹೊಂದಿರುತ್ತೇವೆ. ಇದರಂತೆ ಸುಖದುಃಖಾದಿಭಾವಗಳು ನಮ್ಮ ಮನನಸ್ಸಿಗೆ ಬಂದಾಗ ಆಯಾ ಭಾವಗಳೇ ನಾವಾಗಿರತ್ತೇವೆ. ತಾದಾತ್ಮ್ಯ ಎಂದರೆ ಅದೇ ತಾನಾಗಿರುವುದು (Identifying) ಎಂದರ್ಥ. ಇಲ್ಲಿಯವರೆಗೆ ಹೇಳಿದ ವಿಷಯವೇನೆಂದರೆ ಇಂದ್ರಿಯಗಳಿಂದ ಹೊರಗಿನ ವಿಷಗಳನ್ನು ಅರಿಯಬಹುದು. ಆದರೆ ವಿಷಯಗಳು ಇಂದ್ರಿಯಗಳನ್ನರಿಯ ಲಾರವು. ಹೀಗೆಯೇ ಮನಸ್ಸು ಇಂದ್ರಿಯಗಳನ್ನರಿಯುತ್ತದೆ. 'ನಾನು' ಎಂಬುವನು ಬುದ್ದಿಯನ್ನರಿಯುತ್ತಾನೆ. ಹೀಗೆ ಕ್ರಮವಾಗಿ ಒಳಸರಿದು 'ನಾನು' ಎಂಬ ಅನಿಸುವಿಕೆಯವರೆಗೆ (Me-notion) ಬಂದು ಅಹಂಪ್ರತ್ಯಯನಾಗಿ ನಿಲ್ಲಬೇಕು. ಈಗ ಅತಿಸೂಕ್ಷ್ಮವಾದ ಹಾಗೂ ಮಹತ್ತ್ವದ ವಿಷಯ ವೇನೆಂದರೆ –'ನಾನು' ಎಂಬ ಅನಿಸುವಿಕೆ ಇದೆ ಎಂಬುದು ಏತರಿಂದ ತಿಳಿಯುತ್ತದೆ ? ಎಂಬುದನ್ನು ಲಕ್ಷ್ಯವಿಟ್ಟು ವಿಚಾರಿಸಬೇಕು. ಈ ಹಿಂದೆ ಹೇಳಿದ ಬುದ್ಧಿಮನಸ್ಸುಗಳಿಂದ ಈ 'ನಾನು' ಎಂಬುದನ್ನು ವಿಷಯೀಕರಿಸಿ ತಿಳಿಯಲಾಗುವುದಿಲ್ಲ. ಆದ್ದರಿಂದ 'ನಾನು' ಎಂಬ ಅನಿಸುವಿಕೆಯು – ಅಹಂ ಪ್ರತ್ಯಯವು ಅನುಭವಸ್ವರೂಪವೇ ಆದ ಸಾಕ್ಷಿಯೇ ಆಗಿ ಉಳಿದು ನಾನೆಂಬ ಅನಿಸುವಿಕೆಯಲ್ಲಿಯ ತಾದಾತ್ಮ್ಯಭಾವವನ್ನು ಕಳಚಿಕೊಂಡೇ ಈ ಅಹಂ ಪ್ರತ್ಯಯವನ್ನು ವಿಷಯೀಕರಿಸುತ್ತೇವೆ. ಆದರೆ ಅದನ್ನು ಹೊರಪಡಿಸುವಾಗ ಮತ್ತೆ ಈ ಅಹಂಪ್ರತ್ಯಯ ಬುದ್ಧಿ, ಮನಸ್ಸು, ಇಂದ್ರಿಯಗಳ ಮೂಲಕವೇ ಹೊರಪಡಿಸಬೇಕಾಗಿರುವುದರಿಂದ ಬುದ್ಧಿಯಿಂದಲೇ ತಿಳಿಯಿತು ಎಂದು ಭ್ರಾಂತರಾಗುತ್ತೇವೆ. ಒಬ್ಬರು ಓದುತ್ತಿರುವಾಗ ಕಣ್ಣಿನಿಂದ ನೋಡಿದ್ದನ್ನು

ಬಾಯಿಯಿಂದ ಹೊರಪಡಿಸುತ್ತಿರುತ್ತಾರೆ. ಆಗ ಅವರು ಬಾಯಿಯಿಂದಲೇ ಓದುತ್ತಾರೆ ಎನ್ನುತ್ತೇವೆ. ಬಾಯಿಮುಚ್ಚಿಕೊಂಡು ಕಣ್ಣಿನಿಂದ ಓದಿಕೊಳ್ಳ ಬಹುದು. ಆದರೆ ಕಣ್ಣುಮುಚ್ಚಿಕೊಂಡು ಬಾಯಿಂದ ಓದುವುದು ಸಾಧ್ಯವಿಲ್ಲ. ಹಾಗೆಯೇ ಸಾಕ್ಷಿಸ್ವರೂಪವಾಗಿ ಉಳಿದು ಅಹಂಪ್ರತ್ಯಯವನ್ನು ವಿಷಯೀಕರಿಸಿ ಪುನಃ ಅಹಂಪ್ರತ್ಯಯ, ಬುದ್ಧಿ ಮೊದಲಾದವುಗಳ ಮೂಲಕ ಹೊರಪಡಿಸುತ್ತಿರುತ್ತೇವೆ. ಇದನ್ನು 'ವಿವೇಕ' ದಿಂದ [ಬಿಡಿಸಿಕೊಳ್ಳುವುದರಿಂದ] ಕಂಡುಕೊಳ್ಳುವುದೇ ಮುಖ್ಯ. ಹೀಗೆ ಅನುಭವಿಗಳ ಉಪದೇಶವನ್ನು ಕೇಳುವಾಗ ಹೊರಗಿನ ವಸ್ತುಗಳನ್ನು ನೋಡುವುದನ್ನು ನಿಲ್ಲಿಸಬೇಕು. ಮನಸ್ಸಿನಲ್ಲಿ ನಿಂತು ಹೊರಗಿನ ವಿಷಯಗಳನ್ನು ಕುರಿತು ಚಿಂತಿಸುವುದನ್ನು ಬಿಡಬೇಕು. ಬುದ್ಧಿಯಿಂದ ತರ್ಕಮಾಡುವ ಕೆಲಸವನ್ನು ನಿಲ್ಲಿಸಬೇಕು. 'ನಾನು' ಎಂಬ ಅನಿಸುವಿಕೆಯಲ್ಲಿ ನಿಂತು ನಾನು ಸುಖಿ, ನಾನು ದುಃಖಿ ಎಂಬ ಇತ್ಯಾದಿ ಯೋಚನೆಯಗಳನ್ನು ತಂದುಕೊಳ್ಳುವುದನ್ನು ಕೈಬಿಡಬೇಕು. ಈ ಅಹಂಪ್ರತ್ಯಯವನ್ನು ವಿಷಯೀಕರಿಸುವ ಅನುಭವಸ್ವರೂಪನಾದ ಸಾಕ್ಷಿ ಮಾತ್ರನಾಗಿ ತಾನಿರುವುದನ್ನು ಏಕಾಗ್ರತೆಯಿಂದ ಲಕ್ಷಿಸಬೇಕು. ಇದೇ ಒಳ ಸರಿಯುವ ಕ್ರಮವು. ಹೀಗೆ ಒಳಸರಿದು ಅನುಭವಸ್ವರೂಪದವರೆಗೆ ಲಕ್ಷ್ಯ ವನ್ನು ತಿರುಗಿಸುವುದೇ ಶ್ರವಣದಲ್ಲಿ ಮುಖ್ಯವು. ಈ ಸಾಕ್ಷಿಸ್ವರೂಪವೇ ''ಆತ್ಮ''. ಮಿಕ್ಕ ಎಲ್ಲವೂ ಅಹಂಪ್ರತ್ಯಯ ಮೊದಲುಗೊಂಡು ತೋರುವು ದೆಲ್ಲವೂ ಅನಾತ್ಮ.

## ಆತ್ಮಪ್ರತ್ಯಯ

ಅನುಭವಸ್ವರೂಪನಾದ ಸಾಕ್ಷಿಯೇ ತಾನು ಎಂಬುದನ್ನು ಒಳ ಸರಿಯುವ ಕ್ರಮದಿಂದ ಕಂಡುಕೊಂಡಾಗ 'ನಾನು' ಎಂದುಕೊಳ್ಳುವುದಕ್ಕೆ ಅರ್ಹವಾದದ್ದು ಈ ಸಾಕ್ಷಿಸ್ವರೂಪವೇ ಹೊರತು ಈ ಮೊದಲು ಅಂದುಕೊಳ್ಳುತ್ತಿದ್ದ ಅಹಂ ಪ್ರತ್ಯಯವು ''ನಾನು''ಎಂದುಕೊಳ್ಳುವದಕ್ಕೆ ಯೋಗ್ಯವಾದುದಲ್ಲ ಎಂಬ

ನಿರ್ಣಯವು – ನಿಶ್ಚಿತಬುದ್ಧಿಯು ಅಂತಃಕರಣದಲ್ಲಿ ಹೊರಬರುತ್ತದೆ. ಇದು ಒಂದು ನಂಬಿಗೆಯಲ್ಲ. ಶಾಸ್ತ್ರ ಹಾಗೂ ಗುರುಗಳ ಬಗೆಗೆ ಇರುವ ಶ್ರದ್ಧೆಯಿಂದ ಒಪ್ಪಿಕೊಂಡಿದ್ದಲ್ಲ; ತರ್ಕದಿಂದಲೂ ಊಹಿಸಿದ್ದಲ್ಲ. ಮತ್ತೇನೆಂದರೆ ನೇರಾದ ತಾನೇ ಆಗಿರುವ ಅನುಭವದ ಬಲದಿಂದ ಅನುಭವಸ್ವರೂಪವನ್ನು ಕಂಡುಕೊಂಡಿದ್ದರ ಬಲದಿಂದ ಬಂದಿರುವ ನಿಶ್ಚಿತಬುದ್ಧಿಯಾಗಿದೆ. ಈ ಆತ್ಮಪ್ರತ್ಯಯವು ಅಂತಃಕರಣದಲ್ಲಿ ಹೊರತೋರಿಕೊಳ್ಳುವುದೇ ಶ್ರವಣದ ಪ್ರಯೋಜನವು. ಹೊರಗಿನ ವಸ್ತುಗಳನ್ನು ಕುರಿತು ತಿಳಿದಾಗ ಹೇಗೆ ಆಯಾ ವಸ್ತುಗಳ ಬಗ್ಗೆ ನಿಶ್ಚಿತವಾದ ಅರಿವುಂಟಾಗುವುದೋ ಹಾಗೆಯೇ ಇಲ್ಲಿ ತಾನೇ ತಾನಾಗಿರುವ ಅನುಭವಸ್ವರೂಪದ ಕಡೆಗೆ ಲಕ್ಷ್ಯವನ್ನು ಹಿಂದಿರುಗಿಸಿದಾಗ ಆ ತನ್ನ ನಿಜವಾದ ಇರುವಿಕೆಯ ಬಗ್ಗೆ ಉಂಟಾದ ಅನುಭವಪೂರ್ವಕವಾದ ನಿಶ್ಚಿತಜ್ಞಾನವಾಗಿರುತ್ತದೆ. ಇಲ್ಲಿ ಹೊರಗಿನ ವಸ್ತುಗಳಂತೆ ಆತ್ಮಸ್ವರೂಪವನ್ನು ವಿಷಯೀಕರಿಸಿ ಅರಿತೆನೆಂದು ತಪ್ಪಾಗಿ ತಿಳಿಯಬಾರದು. ಮತ್ತೇನೆಂದರೆ ಸಾಕ್ಷಿಸ್ವರೂಪದವರೆಗೆ ಜಿಜ್ಞಾಸುವಿನ ಲಕ್ಷ್ಯವು ಹೋದಾಗ ಅದು ತನ್ನ ಮನಸ್ಸಾಗಿರುವಿಕೆ ಅಥವಾ ಬುದ್ಧಿಯಾಗಿರುವಿಕೆಯನ್ನು ಕಳೆದುಕೊಂಡು ಆ ಸ್ವರೂಪದಂತೆಯೇ ಭಾಸವಾಗತೊಡಗುತ್ತದೆ. ಇದೇ ಆತ್ಮಪ್ರತ್ಯಯದ ಸ್ವರೂಪವು. ಇದನ್ನೂ ಸಹ ಅನುಭವಸ್ವರೂಪವೇ ಆದ ಸಾಕ್ಷಿಸ್ವರೂಪದ ಬೆಳಕಿನಲ್ಲಿಯೇ ಗುರುತಿಸಿರುತ್ತೇವೆ. ಕಾರಣಸ್ವರೂಪವು ಆತ್ಮಪ್ರತ್ಯಯದಿಂದ ವಿಷಯೀಕರಿಸಲ್ಪಡುವುದಿಲ್ಲ. ಮತ್ತೇನೆಂದರೆ ಜಿಜ್ಞಾಸುವು ಅನುಭವಸ್ವರೂಪನಾಗಿಯೇ ಉಳಿಯುತ್ತಾನೆ. ಇದನ್ನು ಗುರುತಿಸಿದ ಬುದ್ಧಿಯು ಅಥವಾ ಅಂತಃಕರಣವು, ಮನಸ್ಸೂ, ಆತ್ಮಸ್ವರೂಪದಂತೆ ಭಾಸವಾಗುತ್ತದೆ. ಆದ್ದರಿಂದ ಆತ್ಮಸ್ವರೂಪವನ್ನು ಅರಿಯುವುದೆಂದರೆ ಆ ಸ್ವರೂಪವಾಗಿ ಉಳಿಯುವುದೇ ಆಗಿದೆ. ಉತ್ತಮಾಧಿಕಾರಿಯಾದ ಜಿಜ್ಞಾಸುವು ಶ್ರವಣ ಸಮಕಾಲದಲ್ಲಿಯೇ ಸ್ವರೂಪನಾಗಿ ಉಳಿದುಕೊಳ್ಳುತ್ತಾನೆ.

## ಅದ್ವಿತೀಯ ಸ್ವರೂಪ

ಈವರೆಗಿನ ವಿವೇಚನೆಯಿಂದ ಅಹಂಪ್ರತ್ಯಯದವರೆಗಿನ ಎಲ್ಲವೂ ಅನಾತ್ಮ ಎಂದರೆ ನಾನಲ್ಲದ್ದು, ಸಾಕ್ಷಿಸ್ವರೂಪವು ಆತ್ಮ ಎಂದರೆ ನಿಜವಾದ ತಾನು ಎಂಬ ವಿಭಾಗವಾಗಿರುವಂತೆ ತಿಳಿದುಬರುತ್ತದೆ. ಆದರೆ ಹೀಗೆ ಆತ್ಮಾನಾತ್ಮ ಎಂಬ ಎರಡು ಸ್ವತಂತ್ರ ವಸ್ತುಗಳಿಲ್ಲ. ಶ್ರೀಶಂಕರರು ಬೃಹದಾರಣ್ಯಕ ಭಾಷ್ಯದಲ್ಲಿ **"ನ ಚ ಅನಾತ್ಮಾ ಸನ್ ಸರ್ವಮ್ ಆತ್ಮೈವಭವತಿ ಕಸ್ಯಚಿತ್। ತಸ್ಮಾತ್ ಅವಿದ್ಯಯೈವ ಅನಾತ್ಮತ್ವಂ ಪರಿಕಲ್ಪಿತಂ, ನ ತು ಪರಮಾರ್ಥತಃ ಆತ್ಮವ್ಯತಿರೇಕೇಣ ಅಸ್ತಿಕಿಂಚಿತ್॥"** (ಬೃ. 2–4–14, ಭಾ.ಭಾ. 377) ಅನಾತ್ಮ ಎಂಬ ವಸ್ತುವು ಮೊದಲು ಇದ್ದು ಜ್ಞಾನವಾದ ಬಳಿಕ ಅದು ಆತ್ಮವಾಗುವುದು ಎಂದಲ್ಲ. ಆದ್ದರಿಂದ ಆತ್ಮಸ್ವರೂಪವನ್ನು ತಿಳಿಯದಿದ್ದಾಗ ಆ ಅವಿದ್ಯೆಯಿಂದಲೇ ಆತ್ಮನನ್ನೇ ಅನಾತ್ಮ ಎಂದು ತಪ್ಪಾಗಿ ತಿಳಿದಿರುತ್ತೇವೆ. ಆದ್ದರಿಂದ ಅನಾತ್ಮವು ಕಲ್ಪಿತ. ಪರಮಾರ್ಥವಾಗಿ ಆತ್ಮನಿಗಿಂತ ಬೇರೆಯಾಗಿ ಯಾವುದೂ ಇಲ್ಲ ಎಂಬುದು ಈ ವಾಕ್ಯದ ತಾತ್ಪರ್ಯವು. ಆದ್ದರಿಂದ ಆತ್ಮ–ಅನಾತ್ಮ ಎಂಬ ಎರಡು ಇವೆ ಎಂದು ತಿಳಿದುಕೊಳ್ಳಬಾರದು. ಮತ್ತೇನೆಂದರೆ ಆತ್ಮಸ್ವರೂಪವಾದ ಸಾಕ್ಷಿತತ್ತ್ವವೇ ನಿಜವಾಗಿರತಕ್ಕದ್ದು. ಅದನ್ನು ಅರಿಯದಿದ್ದಾಗ ಅದೇ ತತ್ತ್ವವೇ ಅನಾತ್ಮವಾದಂತೆ ಕಾಣುತ್ತದೆ. ಹಾಗೆ ಕಂಡಾಗಲೂ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗಿರುವುದೇ ಇಲ್ಲ. ಆದ್ದರಿಂದ ಆತ್ಮಸ್ವರೂಪವು ಅದ್ವಿತೀಯವು. ಇದನ್ನು ಹೇಗೆ ಅನುಭವದಲ್ಲಿ ಕಂಡುಕೊಳ್ಳಬೇಕೆಂಬುದನ್ನು ನೋಡೋಣ.

1. ಹೊರಗಿನ ಪ್ರಪಂಚಸಮೇತವಾಗಿ ನಮ್ಮ ಶರೀರದಿಂದ ಆರಂಭಿಸಿ ಅಹಂಪ್ರತ್ಯಯದವರೆಗಿನದೆಲ್ಲವೂ ಅನಾತ್ಮ. ಈ ಅನಾತ್ಮವು ಆತ್ಮಸ್ವರೂಪವನ್ನುಳಿದು ತಾನೇ ಇದ್ದದ್ದಾಗಲಿ ತೋರಿಕೊಂಡದ್ದಾಗಲಿ ಅನುಭವದಲ್ಲಿಲ್ಲ.

ಅಹಂಪ್ರತ್ಯಯ ಪ್ರಪಂಚ ಇದೆ ಎನ್ನುವಾಗ ಆತ್ಮಸ್ವರೂಪವಾದ ತಾನು ಇದ್ದೇ ತೀರಬೇಕು.

2. ಈ ಆತ್ಮಸ್ವರೂಪವಾದ ನಿಜವಾದ ತಾನು ಅನಾತ್ಮವನ್ನೆಲ್ಲಾ ವ್ಯಾಪಿಸಿರುತ್ತಾನೆ. ಇಲ್ಲಿಯವರೆಗೆ ಅನಾತ್ಮ ಇಲ್ಲಿಂದ ಮುಂದಕ್ಕೆ ಆತ್ಮ ಎಂದು ಮೇರೆಯನ್ನು ತೋರಿಸಲು ಸಾಧ್ಯವಿಲ್ಲ. ಸಕ್ಕರೆಯಿಂದ ಮಾಡಲ್ಪಟ್ಟ ಆನೆಯಲ್ಲಿ ಇಲ್ಲಿಯವರೆಗೆ ಆನೆ, ಇಲ್ಲಿಂದ ಮುಂದಕ್ಕೆ ಸಕ್ಕರೆ ಎಂಬ ವಿಭಾಗವು ಹೇಗಿಲ್ಲವೋ, ಆನೆಯನ್ನೆಲ್ಲಾ ಸಕ್ಕರೆಯೇ ವ್ಯಾಪಿಸಿದೆಯೋ ಹಾಗೆಯೇ ಆತ್ಮವೇ ಅನಾತ್ಮವನ್ನೆಲ್ಲಾ ವ್ಯಾಪಿಸಿರುತ್ತದೆ. ಹೀಗೆ ಆತ್ಮ ಸ್ವರೂಪದ ವ್ಯಾಪ್ತಿಯನ್ನು ಅನಾತ್ಮದಲ್ಲೆಲ್ಲ ಕಂಡುಕೊಂಡಾಗ ಅನಾತ್ಮವು ಬಾಧಿತವಾಗುತ್ತದೆ ಎಂದರೆ ಕಂಡರೂ ನಿಜವಾಗಿಲ್ಲ ಎಂದಾಗುತ್ತದೆ. ಅನಾತ್ಮದ ನಿಜವು ಆತ್ಮನೇ ಆಗಿರುವುದು ಅನುಭವವೇದ್ಯವಾಗುತ್ತದೆ.

3. ಕೇವಲ ತಾನೇತಾನಾಗಿರುವ ಆತ್ಮಸ್ವರೂಪದ ದೃಷ್ಟಿಯಿಂದ ಅನಾತ್ಮವಾದ ಪ್ರಪಂಚವು ಒಂದಿದೆ ಎಂಬ ತಕರಾರು ಬರುವ ಹಾಗೆಯೇ ಇಲ್ಲ. ಅಹಂಪ್ರತ್ಯಯದ ದೃಷ್ಟಿಯಿಂದಲೇ ಆತ್ಮ ಅನಾತ್ಮ ಎಂಬ ಭೇದವನ್ನು ತತ್ತ್ವವನ್ನು ತಿಳಿಸಲೋಸುಗ ಆರಂಭದಲ್ಲಿ ಅಧ್ಯಾರೋಪದೃಷ್ಟಿಯಿಂದ ಒಪ್ಪಿರುತ್ತದೆ. ಯಾವಾಗ ಆತ್ಮಸ್ವರೂಪದ ವ್ಯಾಪ್ತಿಯನ್ನು ಕಂಡು ಕೇವಲ ಆತ್ಮ ಸ್ವರೂಪದ ದೃಷ್ಟಿಯಿಂದ ನೋಡುವನೋ ಆಗ ತನಗೆ ಎರಡನೆಯದಿಲ್ಲದ ಅದ್ವಿತೀಯನಾಗಿಯೇ ಉಳಿಯುತ್ತಾನೆ. ಆಗ ಸಾಕ್ಷಿಯಾದ ಆತ್ಮ, ಸಾಕ್ಷವಾದ ಅನಾತ್ಮ ಎಂಬ ಭೇದವೇ ಹೊರಟುಹೋಗಿರುತ್ತದೆ. ಹೀಗೆ ಅದ್ವಿತೀಯವಾದ ಆತ್ಮಾನುಭವದಲ್ಲಿ ನೆಲೆನಿಲ್ಲುವುದೇ ಶ್ರವಣದ ಫಲವು. ಶ್ರವಣಮಾತ್ರಕ್ಕೇ ಈ ಫಲವು; ಈ ನೆಲೆನಿಲ್ಲುವಿಕೆಯು ಬಾರದಿದ್ದವರಿಗೆ ಮನನವನ್ನು ಹೇಳಿರುತ್ತದೆ. ಈಗ ಮನನದ ಸ್ವರೂಪವನ್ನು ಕುರಿತು ತಿಳಿಯಲೆತ್ನಿಸೋಣ.

---

# ಮನನ

## ಮನನ ಎಂದರೇನು ?

ಮನನ ಎಂದರೆ ಶ್ರವಣಕಾಲದಲ್ಲಿ ಗ್ರಹಿಸಿದ ಸಂಗತಿಗಳನ್ನು ತಾನೇ ತನ್ನಲ್ಲಿ ಅನುಭವಪೂರ್ವಕವಾದ ಯುಕ್ತಿಗಳಿಂದ ಹೊಂದಿಸಿ ನೋಡಿ ಕೊಳ್ಳುತ್ತಾ ಆತ್ಮಸ್ವರೂಪನಾಗಿ ನೆಲೆನಿಲ್ಲುವ ವಿಧಾನವು. ಶ್ರವಣಕ್ಕೆ ಅನುಭವಿಗಳ ಬೋಧವು ಬೇಕಾಗಿರುತ್ತದೆ. ಮನನದಲ್ಲಿ ಆ ಬೋಧೆಯನ್ನೇ ಯುಕ್ತಿಗೆ ಅನುಭವಪೂರ್ವಕವಾಗಿ ಹೊಂದಿಸಿ ನೋಡಿಕೊಳ್ಳುವುದು ಹೇಗೆ ? ಆ ರೀತಿಗಳು ಯಾವುವು? ಎಂಬುದನ್ನು ಕೇಳಿಕೊಂಡ ಬಳಿಕ ತಾನೊಬ್ಬನೇ ಏಕಾಗ್ರತೆಯಿಂದ ಆ ರೀತಿಗಳನ್ನನುಸರಿಸುತ್ತಾ ಕೇವಲಾತ್ಮನಾಗಿ ಅದ್ವಿತೀಯ ನಾಗಿ ನೆಲೆನಿಲ್ಲುವುದೇ ಮುಖ್ಯಗುರಿ. ಆದ್ದರಿಂದ ಅನುಸಂಧಾನ ಮಾಡ ಬೇಕಾದ ಅನುಭವಪೂರ್ವಕವಾದ ಯುಕ್ತಿಗಳನ್ನು ಇಲ್ಲಿ ತೋರಿಸಲಾಗುತ್ತದೆ.

## ಸಾಕ್ಷ್ಯನುಭವವನ್ನು ಆಶ್ರಯಿಸುವುದು

ನಮಗೆ ವಿಷಯಗಳನ್ನು ತಿಳಿದುಕೊಳ್ಳಲು ಬುದ್ಧಿ, ಮನಸ್ಸು, ಇಂದ್ರಿಯ ಗಳು ಬೇಕೆಂಬುದು ಸಹಜವಾಗಿದೆ. ಆದರೆ ಬುದ್ಧಿಯೇ ಮೊದಲಾದ ಯಾವ ಸಾಧನೆಯ ಅಗತ್ಯವಿಲ್ಲದೆಯೇ ಒಳಗಿನಿಂದ ಕೆಲವು ಅನುಭವಗಳು ಬರುತ್ತಿರುತ್ತವೆ. ಉದಾ. : ''ನಾನೊಂದು ಕನಸನ್ನು ಕಂಡೆನು'' ಇದು ನಮ್ಮ ಬುದ್ಧಿಗೆ. ಒಳಗಿನಿಂದ ನೇರಾಗಿ ಬಂದ ಅನುಭವವು. ಹೊರಗಿನ ವಸ್ತುಗಳನ್ನರಿಯುವಾಗ ಇಂದ್ರಿಯ, ಮನಸ್ಸು, ಬುದ್ಧಿಗಳನ್ನುಪಯೋಗಿಸಿ ಅರಿಯುತ್ತೇವೆ. ಆದರೆ ''ನನಗೊಂದು ಕನಸಾಯಿತು'' ಎಂಬುದನ್ನರಿಯಲು ಇವುಗಳ ಕಸರತ್ತೇನೂ ಬೇಕಾಗಿಲ್ಲ. ಇದರಂತೆಯೇ ''ನಾನು ಸುಖವಾಗಿ ನಿದ್ರಿಸಿದೆನು'' ಎಂಬ ಅನುಭವವು ಒಳಗಿನಿಂದಲೇ ಈ ಬುದ್ಧಿಗೆ ನೇರಾಗಿ ಬಂದಿರುತ್ತದೆ. ಹೀಗೆ ಇಂದ್ರಿಯ, ಮನಸ್ಸು, ಬುದ್ಧಿಗಳ ಕಸರತ್ತಿನ ಅಪೇಕ್ಷೆ

ಇಲ್ಲದೆ ನೇರಾಗಿ ಒಳಗಿನಿಂದ ಬರುವ ಈ ಬಗೆಯ ಅನುಭವವನ್ನು 'ಸಾಕ್ಷ್ಯನುಭವ' (Intution) ಎನ್ನುತ್ತಾರೆ. ಈ ಅನುಭವವು ಎಲ್ಲರಿಗೂ ಸಹಜವಾಗಿಯೇ ಇರುವುದರಿಂದ ಇದು ಸಾರ್ವತ್ರಿಕಾನುಭವವು. ಮನನಕ್ಕೆ ಸಾಕ್ಷ್ಯನುಭವವನ್ನೇ ಆಶ್ರಯಿಸಬೇಕು. ವೇದನಪ್ರತ್ಯಯಾನುಭವಗಳನ್ನು ಹಿಡಿಯಬಾರದು.

## ಮನನಮಾಡುವ ಕ್ರಮ

ವ್ಯವಹಾರದೃಷ್ಟಿಯಿಂದ "ನಾನು ಈ ಜಗತ್ತಿನಲ್ಲಿ ಒಂದು ಕಾಲದಲ್ಲಿ ಒಂದು ದೇಶದಲ್ಲಿ ಒಬ್ಬ ತಂದೆತಾಯಿಗಳಿಂದ ಜನಿಸಿದ್ದೇನೆ. ನನ್ನಂತೆ ಇತರ ಜನರೂ ಜೀವಿಗಳೂ ಇಲ್ಲಿದ್ದಾರೆ. ನಾನು ಹುಟ್ಟುವ ಮೊದಲೂ ಈ ಪ್ರಪಂಚವು ಇತ್ತು. ನಾನು ಸತ್ತಹೋದ ಬಳಿಕವೂ ಇದು ಇದ್ದೇ ಇರುತ್ತದೆ. ಇಂಥ ಅನಾದಿ ಅನಂತವಾದ ಪ್ರಪಂಚದಲ್ಲಿ ಸ್ವಲ್ಪ ದಿನ ಇದ್ದು ಸತ್ತು ಹೋಗುವವನು ನಾನು" ಎಂದು ತಿಳಿದಿರುತ್ತೇನೆ. ಇದು ವ್ಯವಹಾರಕ್ಕೆ ಬೇಕೂ ಆಗಿದೆ. ಸರಿಯಾಗಿಯೂ ಇದೆ. ಆದರೆ ಪರಮಾರ್ಥತತ್ತ್ವವನ್ನು ಅನುಭವ ಪೂರ್ವಕವಾಗಿ ಗೊತ್ತುಪಡಿಸುವಾಗ ಈ ಮೇಲಿನ ಗ್ರಹಿಕೆಯು ಉಪಯೋಗ ವಾಗುವುದಿಲ್ಲ. ಈ ವಿಚಾರ ಸರಣಿ ಹೇಗೆಂದರೆ –

1. ಸೂರ್ಯ, ಚಂದ್ರ, ಗ್ರಹ, ನಕ್ಷತ್ರಾದಿ ಅನಂತಕೋಟಿಬ್ರಹ್ಮಾಂಡ ಹಾಗೂ ಲೋಕಲೋಕಾಂತರಗಳು ಸೇರಿರುವ "ಆಧಿದೈವಿಕಪ್ರಪಂಚ" (Divine plane) ಎಂಬ ಒಂದುಗುಂಪು. ಎದುರಿಗೆ ಕಾಣುವ ಭೌತಿಕಪ್ರಪಂಚ ಹಾಗೂ ಅದರಲ್ಲಿರುವ ಎಲ್ಲ ಜೀವರುಗಳ ಶರೀರಾದಿಗಳ (ತನ್ನ ಶರೀರವೂ ಸೇರಿ) ಸಮೇತವಾದ ಇಡೀ ವಿಶ್ವವನ್ನು ಒಂದು ಗುಂಪು ಮಾಡಿಕೊಳ್ಳಬೇಕು. ಇದಕ್ಕೆ ಆಧಿಭೌತಿಕಪ್ರಪಂಚ (Material plane) ಎಂದು ಹೆಸರು. ಏಕೆಂದರೆ ಇದು ಆಕಾಶ, ವಾಯು, ಅಗ್ನಿ, ಜಲ, ಭೂಮಿ ಎಂಬ ಪಂಚಮಹಾಭೂತಗಳಿಂದಲೇ ಆಗಿರುತ್ತದೆ. ಭೌತಿಕವಿಜ್ಞಾನಿಗಳು

ಹಿಂದೆ ಕಂಡುಹಿಡಿದಿರುವ, ಈಗ ಇದ್ದದ್ದನ್ನು ನೋಡಿಸುವ, ಮುಂದಕ್ಕೆ ಕಂಡುಹಿಡಿಯುವ ಎಲ್ಲಾ ಬಗೆಯ (ಕಂಪ್ಯೂಟರ್, ರೋಬಟ್ಸ್, ಸ್ಪೂಟ್ನಿಕ್ ವಗೈರೆ) ಎಲ್ಲಾ ಯಂತ್ರಗಳೂ ಆಧಿಭೌತಿಕವೇ ಆಗಿವೆ. ಇದು ಎರಡನೆಯ ಗುಂಪು. ಇನ್ನು ತನ್ನ ದೇಹದ ಒಳಗಡೆ ಇರುವ ಪ್ರಾಣ, ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ ಸುಖ, ದುಃಖ, ವೇದನೆಗಳು, ಕೊನೆಗೆ ''ನಾನು ಇಂಥವನು (ಳು)'' ಎಂಬ ಅಹಂಪ್ರತ್ಯಯವೂ ಸೇರಿ ಒಂದು ಗುಂಪು. ಇದನ್ನು ''ಆಧ್ಯಾತ್ಮಿಕಪ್ರಪಂಚ' (Spiritual plane or Corporial plane) ಎಂಬುದು ಮೂರನೆಯ ಗುಂಪು. ಈ ಮೂರೂ ಬಗೆಯ ಪ್ರಪಂಚಗಳನ್ನು ಸೇರಿಸಿ ಒಂದು ಗುಂಪು ಮಾಡಿಕೊಳ್ಳಬೇಕು. ಮೇಲೆ ವರ್ಣಿಸಿದ ಮೂರು ಬಗೆಯ ಪ್ರಪಂಚವು ಅನಾದಿ ಅನಂತವಾಗಿರುವ ಕಾಲ, ದೇಶ, ಕಾರಣಭಾವಗಳಿಗೆ ಒಳಪಟ್ಟಿರುತ್ತದೆ. [Time, Space & Causation] . ಹೀಗೆ ಹೇಳಿದ ಮೂರು ಬಗೆಯ ಪ್ರಪಂಚವೂ ಕಾಲದೇಶಕಾರ್ಯಕಾರಣಭಾವಗಳೂ ಸೇರಿ ಒಟ್ಟು ಪ್ರಪಂಚವು (ಅನೇಕ ಜೀವರು, ದೇವತೆಗಳು, ಮೊದಲಾದ ಎಲ್ಲಾ ನಾನಾತ್ತ್ವವೂ ಸೇರಿದ ಒಟ್ಟು ಪ್ರಪಂಚವು ) ಸಾಕ್ಷಿಸ್ವರೂಪನಾದ ತನ್ನಲ್ಲಿ ಎಚ್ಚರದ ಅವಸ್ಥೆಯು ತೋರಿಕೊಂಡಾಗ ಮಾತ್ರ ಏಕ ಕಾಲಕ್ಕೆ ಗೋಚರವಾಗುವುದು ಎಂಬುದನ್ನು ಕಂಡುಕೊಳ್ಳಬೇಕು. ಅರ್ಥಾತ್ ಎಚ್ಚರದ ಅವಸ್ಥೆಯು ತೋರುವ ಮೊದಲು 'ತಾನು', ತನ್ನಲ್ಲಿಇಡೀ ಎಚ್ಚರದ ಅವಸ್ಥೆ, ಆ ಅವಸ್ಥೆಯಲ್ಲಿ 'ನಾನು' ಎಂಬ ಅಹಂಪ್ರತ್ಯಯ ಹಾಗೂ ಹೊರಗಿನ ಪ್ರಪಂಚ, ಎಂದು ಕಂಡುಕೊಳ್ಳಬೇಕು.

2. ಕನಸು ತೋರುವ ಮೊದಲು ನಿದ್ರೆಯಲ್ಲಿ ಬರೀ ತಾನೇ ಇರುವೆನು . ಆ ತನ್ನಲ್ಲಿಯೇ ಇಡೀ ಕನಸಿನ ಅವಸ್ಥೆ. ಆ ಅವಸ್ಥೆಯಲ್ಲಿ 'ನಾನು ಇಂಥವನು' ಎಂಬ ಅಹಂಪ್ರತ್ಯಯ, ಹಾಗೂ ಅನೇಕ ಜೀವರುಗಳಿಂದ ಕೂಡಿದ ಆಧಿ ಭೌತಿಕಪ್ರಪಂಚ, ಸೂರ್ಯಚಂದ್ರಾದಿ ಆಧಿದೈವಿಕಪ್ರಪಂಚ, ಕನಸಿಗೇ

ಮೀಸಲಾದ ಅನಾದಿ ಅನಂತವಾದ ಕಾಲದೇಶಕಾರ್ಯಕಾರಣಭಾವಗಳು ಎಲ್ಲವೂ ಒಮ್ಮೆಗೇ ತೋರಿಕೊಳ್ಳುವುವು. ಕನಸಿನ ಅವಸ್ಥೆ ಹೋದೊಡನೆಯೇ ಎಲ್ಲವೂ ಒಟ್ಟಿಗೇ (ಇಡೀ ಕನಸೇ ) ಹೋಗಿಬಿಡುವುದು ಎಲ್ಲರ ಅನುಭವವು. ಇದರಂತೆಯೇ ತಾನು ತನ್ನಲ್ಲಿ ಎಚ್ಚರದಲ್ಲಿ ಅಹಂಪ್ರತ್ಯಯ ಪ್ರಪಂಚ ಎಂದು ಇಡೀ ಎಚ್ಚರವನ್ನೇ ಉಂಡೆಯಾಗಿ ಲಕ್ಷಿಸಬೇಕು. ಹೀಗೆ ಲಕ್ಷಿಸಿದಾಗ ಜಿಜ್ಞಾಸುವು ಸಾಕ್ಷಿಸ್ವರೂಪನಾಗಿಯೇ ಉಳಿದಿರುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿಗಳೇನೆಂದರೆ ನನಗೆ ಕನಸಾಯಿತು ಎಂಬುದು ಹೇಗೆ ಸಾಕ್ಷ್ಯನುಭವವೋ ಹಾಗೆಯೇ ನನಗೆ ಎಚ್ಚರವಾಯಿತು ಎಂಬುದೂ ಸಾಕ್ಷ್ಯನುಭವವೇ ಆಗಿದೆ. ಇಡೀ ಎಚ್ಚರವನ್ನು ಸಾಕ್ಷಿಸ್ವರೂಪನಾಗಿ ಉಳಿದು ನೋಡಲು ಸಾಧ್ಯ. 'ಅಹಂಪ್ರತ್ಯಯ' ಅಥವಾ 'ನಾನು' ಎಂದುಕೊಂಡರೆ ಅವಸ್ಥೆಯೊಳಗೆ ಸಿಕ್ಕಿಕೊಳ್ಳುತ್ತೇವೆ.

3. ಇನ್ನು ನಿದ್ರೆ (Sound sleep) ಅಥವಾ ಗಾಢನಿದ್ರೆ ಎಂಬುದನ್ನು ಈಗ ಲಕ್ಷಿಸಿ ಎಚ್ಚರಸ್ವಪ್ನಗಳಿಲ್ಲದ ಬರೀ 'ತಾನೇ' ಉಳಿದಿರುವುದನ್ನು ಗಮನಿಸಬೇಕು. ಎಚ್ಚರದ ಬುದ್ಧಿಯ ದೃಷ್ಟಿಯಿಂದ ನಿದ್ರೆಯ ಬಗ್ಗೆ ಗ್ರಹಿಕೆಗಳನ್ನು ಮಾಡಿಕೊಳ್ಳಬಾರದು. ಹೀಗೆ ಗಾಢನಿದ್ರೆಯನ್ನು ಲಕ್ಷಿಸಿದಾಗ ಅಲ್ಲಿಯ ಅನುಭವವು ಹೇಗಿದೆಯೋ ಹಾಗೆಯೇ ಗ್ರಹಿಸಬೇಕು. ಆಗ 'ನಾನು' ಚೆನ್ನಾಗಿ ನಿದ್ರಿಸಿದೆನು 'ಸುಖವಾಗಿ ನಿದ್ರೆಮಾಡಿದೆನು' ಎಂಬುದೂ ಸಹ ಸಾಕ್ಷ್ಯನುಭವವೇ ಆಗಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ನಿದ್ರೆಯ ಅನುಭವವನ್ನು ಬುದ್ಧಿಯಿಂದ ಅರಿಯುವಹಾಗಿಲ್ಲ, ಅಹಂಪ್ರತ್ಯಯ ಮೊದಲುಗೊಂಡು ಬುದ್ಧಿ, ಮನಸ್ಸು ಮುಂತಾದ ಯಾವುದಕ್ಕೂ ನಿದ್ರೆಯಲ್ಲಿ ಪ್ರವೇಶವಿಲ್ಲ. ಅಲ್ಲಿ ಎಚ್ಚರಸ್ವಪ್ನಗಳಿಲ್ಲದ ಬರೀ ತಾನಾಗೇ ಉಳಿದಿರುತ್ತಾನೆ. ಈ ತನ್ನಲ್ಲಿಯೇ ಇಡೀ ಎಚ್ಚರ ಹಾಗೂ ಇಡೀ ಸ್ವಪ್ನಗಳು ತೋರಿ ಅಡಗುತ್ತವೆ. ಇವುಗಳ ಸೋಂಕು ಯಾವಾಗಲೂ ತನಗೆ ಇರುವುದೇ ಇಲ್ಲ. ಇದನ್ನು ಏಕಾಗ್ರತೆಯಿಂದ ಲಕ್ಷಿಸಿ ನಿಶ್ಚಯಿಸಿ ಈ ಕೆಳಗೆ ತೋರಿಸಿರುವಂತೆ ಯುಕ್ತಿಗಳನ್ನು ಅನುಭವಪೂರ್ವಕವಾಗಿ ಜೋಡಿಸಿ ನಿರ್ಣಯವನ್ನು ತೆಗೆಯಬೇಕು.

## ನಿರ್ಣಯಿಸುವ ಕ್ರಮ

ಎರಡು ಪಾಕ್ಷಿಕವಾದ ಅನುಭವಗಳನ್ನು ತೆಗೆದುಕೊಂಡು ಅನುಭವ ಪೂರ್ವಕವಾಗಿ ಅವುಗಳನ್ನು ಜೋಡಿಸಿ ನೋಡಿ ತನ್ನ ಸ್ವರೂಪದ ಬಗ್ಗೆ ನಿಶ್ಚಿತವಾದ ನಿರ್ಣಯಗಳನ್ನು ತೆಗೆಯಬೇಕು. ಹಾಗೆ ನಿರ್ಣಯಿಸಿದಾಗ ಈಗಲೇ ಕೇವಲ ತಾನಾಗಿ ಉಳಿದಿರುತ್ತಾನೆ. ಆ ಪ್ರಕಾರವು ಹೀಗಿದೆ –

ಕನಸು ಎಂಬುದು ತನ್ನಲ್ಲಿಯೇ ಅಡಗುವ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವು. ಅದರಂತೆ ಎಚ್ಚರ ಎಂಬುದೂ ಸಹ ತನ್ನಲ್ಲಿಯೇ ತೋರಿ ಅಡಗುವ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವು. ಇವೆರಡಕ್ಕೂ ಕೇವಲ ಅನುಭವಸ್ವರೂಪನಾದ ತಾನು ಆಧಾರನು. ಎಚ್ಚರದ ಅವಸ್ಥೆ ತೋರುವಾಗ ಕನಸು ಇರುವುದೇ ಇಲ್ಲ. ಹಾಗೆಯೇ ಕನಸು ತೋರುವಾಗ ಎಚ್ಚರವೂ ಇರುವುದಿಲ್ಲ. ಯಾವುದಾದರೊಂದು ಅವಸ್ಥೆಯು ತೋರಿದರೆ ಇನ್ನೊಂದನ್ನು ಸಂಪೂರ್ಣವಾಗಿ ಒರೆಸಿಹಾಕಿ ತೋರುತ್ತದೆ. ಅನುಭವವೂ ಹೀಗಿರುವುದರಿಂದ ಎರಡೂ ಅವಸ್ಥೆಗಳಿಗೆ ಆಧಾರವಾದ ಕೇವಲ ಅನುಭವಸ್ವರೂಪನಾದ ತಾನು ಈ ಎರಡರಲ್ಲಿ ಯಾವ ಅವಸ್ಥೆಗೂ ಸೇರಿದವನಲ್ಲ. ಈ ಅವಸ್ಥೆಗಳ ಅಂಟು ತನಗೆ ಯಾವಾಗಲೂ ಇಲ್ಲ. ತನ್ನ ಬೆಳಕಿನಲ್ಲಿಯೇ (ಅರಿವಿನ ಸ್ವರೂಪದಲ್ಲಿಯೇ) ಕನಸು ತೋರುತ್ತದೆ. ಹಾಗೆಯೇ ಇಡೀ ಎಚ್ಚರವೂ ಸಹ ತನ್ನ ಬೆಳಕಿನಲ್ಲಿಯೇ ತೋರಿ ಅಡಗುತ್ತದೆ. ಆದ್ದರಿಂದ ಈ 'ತಾನು' 'ಸ್ವಯಂಜ್ಯೋತಿಯು' ಎಂದರೆ ಬರೀ ಅರಿವಿನ ಅನುಭವಸ್ವರೂಪನು. ತಾನಿಲ್ಲದೆ ಈ ಅವಸ್ಥೆಗಳಿರುವವೆಂದು ಹೇಳುವುದು ಹಾಸ್ಯಾಸ್ಪದವು. ಕನಸನ್ನಾಗಲಿ ಎಚ್ಚರವನ್ನಾಗಲಿ ಇದೆ ಎಂದು ಹೇಳುವುಕ್ಕೆ ಆಧಾರವಾದ ತಾನು ಸತ್ತತ್ತ್ವವು. ಈ ಎರಡೂ ಅವಸ್ಥೆಗಳು ತನ್ನಲ್ಲಿ ತೋರಿ ಅಡಗುವ ಹುಸಿತೋರಿಕೆಗಳು. ಎಚ್ಚರವಾಗಲಿ ಕನಸಾಗಲಿ ತನ್ನಲ್ಲಿ ತೋರಿದಾಗ ಆ ಅವಸ್ಥೆಯನ್ನು ತಾನೇ ಪೂರ್ಣವಾಗಿ ವ್ಯಾಪಿಸಿರುತ್ತಾನೆ. ಆದ್ದರಿಂದ ಇಲ್ಲಿಯವರೆಗೆ ತಾನು ಇಲ್ಲಿಂದೀಚೆಗೆ ಅವಸ್ಥೆ ಎಂದು ಬೇರೆ

ತೋರಿಸಲು ಸಾಧ್ಯವಿಲ್ಲ. ಈ ಕಾರಣದಿಂದ ತಾನೇತಾನಾಗಿರುವ ಸ್ವರೂಪಕ್ಕೆ ನಿಜವಾಗಲೂ ಎರಡನೆಯದಾಗಿರುವ ಪದಾರ್ಥಗಳು ಈ ಅವಸ್ಥೆಗಳಲ್ಲಿ ನಿಜವಾಗಿಯೂ ತಾನಾಗಿ ಗುರುತಿಸದಿದ್ದಾಗ ತಾನೇ ಎಚ್ಚರದಂತೆ ಕನಸಿನಂತೆ ಕಂಡಿದ್ದಾನೆ. ಹೀಗೆ ನೋಡಿದಾಗ ಅವಸ್ಥೆಗಳು ತೋರುತ್ತಿದ್ದರೂ ತೋರದಿದ್ದರೂ ತಾನು ಅದ್ವಿತೀಯನು ಎಂಬ ನಿರ್ಣಯವನ್ನು ತೆಗೆದಾಗ ಜಿಜ್ಞಾಸುವು ಕೇವಲಾತ್ಮಸ್ವರೂಪನಾಗಿಯೇ ಉಳಿದಿರುತ್ತಾನೆ. ಇದೇ ನಿರ್ಣಯಿಸುವ ಕ್ರಮವು.

## ನಿದ್ರೆಯ ಅನುಭವದಿಂದ ನಿರ್ಣಯಿಸುವಿಕೆ

1. ಗಾಢನಿದ್ರೆಯಲ್ಲಿ ಅನುಭವಸ್ವರೂಪನಾದ ತಾನೇ ಉಳಿದಿರುವುದರಿಂದ ತನ್ನ ಸಹಜಸ್ವಭಾವವು ಯಾವಾಗಲೂ, ಎಚ್ಚರಸ್ವಪ್ನಗಳಲ್ಲಿ ಪ್ರಪಂಚದ ಸೋಂಕು ಇರುವಂತೆ ತೋರುವಾಗಲೂ, ನಿಜವಾದ ತಾನು ಈ ತೋರಿಕೆಯ ಸೋಂಕಿಲ್ಲದವನಾಗಿದ್ದೇನೆ ಎಂದು ನಿರ್ಣಯಿಸಬೇಕು.

2. ಇಲ್ಲಿ 'ನಿದ್ರೆ' ಎಂಬ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವನ್ನೂ ಹಾಗೂ 'ಎಚ್ಚರ' ಎಂಬ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವನ್ನೂ ತೆಗೆದುಕೊಂಡು ಎರಡನ್ನೂ ಯುಕ್ತಿಯಿಂದ ಹೊಂದಿಸಿನೋಡಲು ಅನುವು ಮಾಡಿಕೊಟ್ಟಿದೆ.

3. ಇಲ್ಲಿ ಎರಡನ್ನೂ ಹೊಂದಿಸುವುದು ಹೇಗೆಂದರೆ– ಎಚ್ಚರದಲ್ಲಿ 'ನಾನು ಇಂಥವನು' ಎಂಬ ಅಹಂಪ್ರತ್ಯಯವೇ ತನ್ನ ನಿಜವಾದ ಸ್ವಭಾವವು ಎಂದು ಅನಿಸುತ್ತದೆ. ಆದ್ದರಿಂದ ನಾನು ದೇಹೇಂದ್ರಿಯಗಳುಳ್ಳವನು, ಮನಸ್ಸುಬುದ್ಧಿಗಳುಳ್ಳವನು, ಸುಖದುಃಖಗಳನ್ನು ಅನುಭವಿಸುವವನು ಎಂದೇ ತನ್ನನ್ನು ಪ್ರತಿಯೊಬ್ಬನೂ ತಿಳಿದಿರುತ್ತಾನೆ. ಇದು ಎಚ್ಚರದ ಸಮಾಚಾರವು. ಹೀಗೆ ಶರೀರೇಂದ್ರಿಯಗಳಿಂದೊಡಗೂಡಿ ಸುಖದುಃಖಗಳನ್ನು ಅನುಭವಿಸುತ್ತಿರುವ ಸಂಸಾರಿಯಾಗಿರುವುದೇ ತನ್ನ ಸ್ವಭಾವವಾಗಿದ್ದರೆ ಕನಸಿನಲ್ಲಿ ಈ ಎಚ್ಚರದ ಶರೀರ ಅಥವಾ ಸುಖದುಃಖಗಳು ಏಕೆ

ಬರುವುದಿಲ್ಲ? ಅಲ್ಲಿ ಬೇರೆ ಪ್ರಕಾರದ ಶರೀರ ಸುಖದುಃಖಗಳೇ ನಮಗೆ ಇರುವಂತೆ ತೋರುವುದು ಸಾರ್ವತ್ರಿಕ ಅನುಭವವು. ಇನ್ನು ಈ ಎರಡರುಗಳಲ್ಲಿನ ಯಾವುದೇ ಬಗೆಯ ಶರೀರಾದಿಗಳೂ ಸುಖದುಃಖಾದಿ ಗಳೂ ಸುಷುಪ್ತಿಯಲ್ಲಿ ತನಗೆ ಏಕೆ ಇರುವುದಿಲ್ಲ ? ಎಂಬುದನ್ನು ವಿಚಾರಿಸಿದಾಗ ತನ್ನ ಸ್ವಭಾವವು ಸುಖದುಃಖಾದಿಗಳನ್ನು ಅನುಭವಿಸುವ ಸಂಸಾರಿಯಾಗಿರುವುದಲ್ಲವೇ ಅಲ್ಲ. ನಿತ್ಯನೂ, ನಿಷ್ಪ್ರಪಂಚನೂ, ಅನಂತಾನಾದಿಯೂ, ಸುಖದುಃಖಾದಿಗಳ ಸೋಂಕಿಲ್ಲದವನೂ ಆಗಿರುವೆನೆಂಬ ನಿರ್ಣಯವು ಹೊರಡುತ್ತದೆ. ಈ ನಿರ್ಣಯಕ್ಕೆ ಬಂದಾಗ ಜಿಜ್ಞಾಸುವು ಕೇವಲಾತ್ಮನಾಗಿ ನಿಂತಿರುತ್ತಾನೆ. ಹೀಗೆ ಅನುಭವಪೂರ್ವಕಯುಕ್ತಿಗಳನ್ನು ಉಪಯೋಗಿಸಿ ನಿರ್ಣಯವನ್ನು ತೆಗೆಯುವ ಕ್ರಮಕ್ಕೆ ಮನನ ಎನ್ನುತ್ತಾರೆ.

## ಶ್ರೌತ ತರ್ಕ

ಆಚಾರ್ಯರು ''ಮಂತವ್ಯಃ ತರ್ಕತಃ'' (ಬೃ. 2–4–5), ತರ್ಕದಿಂದ ಮನನಮಾಡಬೇಕು ಎಂದಿದ್ದಾರೆ. ಇಲ್ಲಿ ಕುತರ್ಕಗಳಾಗಲಿ ಪ್ರಮಾಣತರ್ಕ ಗಳಾಗಲಿ ಉಪಯೋಗಕ್ಕೆ ಬರುವುದಿಲ್ಲ. ಶ್ರೌತತರ್ಕಗಳನ್ನೇ ಉಪಯೋಗಿಸ ಬೇಕೆಂದು ಆಚಾರ್ಯರು ಸೂತ್ರಭಾಷ್ಯದಲ್ಲಿ ಅಪ್ಪಣೆ ಕೊಡಿಸಿದ್ದಾರೆ. **''ನಾನೇನ ಮಿಷೇಣ ಶುಷ್ಕತರ್ಕಸ್ಯ ಅತ್ರ ಆತ್ಮಲಾಭಃ ಸಂಭವತಿ। ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ।''** (ಸೂ.ಭಾ.2–1–6 ಭಾ.ಭಾ. 418). ಮನನಕ್ಕೆ ತರ್ಕವು ಬೇಕೆಂಬ ನೆಪದಿಂದ ಇಲ್ಲಿ ಶುಷ್ಕತರ್ಕಗಳು ಕೆಲಸಕ್ಕೆ ಬರುವುದಿಲ್ಲ. ಶ್ರುತಿ ಗಳಲ್ಲಿ ಉಪದೇಶಿಸಿದ ತರ್ಕಗಳನ್ನೇ ಅನುಭವಾಂಗವಾಗಿ ತೆಗೆದು ಕೊಳ್ಳಬೇಕು ಎಂಬುದು ಈ ವಾಕ್ಯದ ತಾತ್ಪರ್ಯವು. ಇನ್ನು ಶ್ರೌತಕ್ಕೆ ವಿರೋಧವಲ್ಲದ ಪ್ರಮಾಣತರ್ಕಗಳನ್ನು ತೆಗೆದುಕೊಳ್ಳಬಹುದೆಂದು ಶ್ರೀಶಂಕರರು ಸೂತ್ರಭಾಷ್ಯದಲ್ಲಿ ಹೇಳಿದ್ದಾರೆ. ಆದರೆ ಮುಖ್ಯವಾಗಿ ಶ್ರೌತ ತರ್ಕವೇ ಮನನಕ್ಕೆ ಬೇಕಾಗಿರುತ್ತದೆ. ಶ್ರೌತತರ್ಕದ ಸ್ವರೂಪವೇನೆಂದರೆ–

ಕಾಲದೇಶಕಾರ್ಯಕಾರಣಭಾವ ಇಂದ್ರಿಯಗಳು ಮನಸ್ಸು ಬುದ್ಧಿ ಕೊನೆಗೆ ಅಹಂಪ್ರತ್ಯಯವನ್ನೂ ಬೆಳಗುವ ಸಾಕ್ಷಿಸ್ವರೂಪವನ್ನೇ ಹಿಡಿದು ಸಾಕ್ಷ್ಯನುಭವಗಳನ್ನೇ ತೆಗೆದುಕೊಂಡು ಆತ್ಮನ ನಿಜಸ್ವರೂಪವನ್ನು ನಿಶ್ಚೈಸುವ ಕ್ರಮೇವೇ ಶ್ರೌತತರ್ಕದ ಸ್ವರೂಪವು. ಈವರೆಗೆ ಎಚ್ಚರಕನಸು ನಿದ್ರೆಗಳ ಸಾಕ್ಷ್ಯನುಭವವನ್ನವಲಂಬಿಸಿ ಆತ್ಮಸ್ವರೂಪನಾದ ತಾನು ನಿತ್ಯನು, ನಿಷ್ಪ್ರಪಂಚನು ಎಂದು ನಿರ್ಣಯಿಸುವ ಪ್ರಕಾರವೇ ಶ್ರೌತತರ್ಕವು. ಈ ರೀತಿಯ ಮನನದಿಂದ ಜಿಜ್ಞಾಸುವು ಮನನಸಮಕಾಲದಲ್ಲಿಯೇ ಕೇವಲಾತ್ಮ ಸ್ವರೂಪನಾಗಿ ನೆಲೆನಿಂತಿರುತ್ತಾನೆ.

## ವಿವಿಧ ಪ್ರಕ್ರಿಯೆಗಳು

ಶ್ರುತಿಗಳಲ್ಲಿ ಜಿಜ್ಞಾಸುವು ಮನನಮಾಡುವುದಕ್ಕೆ ವಿವಿಧ ಪ್ರಕ್ರಿಯೆ (ರೀತಿ Method) ಗಳನ್ನು ಹೇಳಿದೆ. ಈವರೆಗೆ ತೋರಿಸಿದ ಅವಸ್ಥಾತ್ರಯವೇ ಅಲ್ಲದೆ 1. ಸಾಮಾನ್ಯವಿಶೇಷ ಪ್ರಕ್ರಿಯೆ, 2. ಕಾರ್ಯಕಾರಣ ಅನನ್ಯತ್ವ ಪ್ರಕ್ರಿಯೆ, 3. ಅನ್ವಯವ್ಯತಿರೀಕ ಪ್ರಕ್ರಿಯೆ ಮುಂತಾಗಿ ವಿವಿಧ ಪ್ರಕ್ರಿಯೆ ಗಳನ್ನು ಬೋಧಸೌಕರ್ಯಕ್ಕಾಗಿ ವೇದಾಂತದಲ್ಲಿ ಉಪಯೋಗಿಸಿರುತ್ತಾರೆ. ಅನುಭವಿಗಳಾದ ಬ್ರಹ್ಮನಿಷ್ಠರಿಂದ ಇವುಗಳನ್ನು ತಿಳಿದುಕೊಂಡು ಜಿಜ್ಞಾಸುಗಳು ಸ್ವರೂಪದಲ್ಲಿ ನೆಲೆನಿಲ್ಲಲು ಮನನಮಾಡಬೇಕು. (ಇಲ್ಲ ಯೋಚಿಸಿ ಕೊಳ್ಳಬೇಕು.)

## ಒಂದೇ ಪ್ರಕ್ರಿಯೆ

ಈವರೆಗೆ ಮನನಕ್ಕಾಗಿ ವಿವಿಧ ಪ್ರಕ್ರಿಯೆಗಳನ್ನು ವೇದಾಂತದಲ್ಲಿ ಹೇಳಿರುವುದಾಗಿ ತಿಳಿಸಿದೆಯಷ್ಟೇ ? ಆದರೆ ಈ ಎಲ್ಲ ಬಗೆಯ ಪ್ರಕ್ರಿಯೆಗಳೂ ಒಂದೇ ಒಂದು ಪ್ರಕ್ರಿಯೆಯ ಒಳಭೇದಗಳಾಗಿರುತ್ತವೆ. ಅದು ಯಾವುದೆಂದರೆ ''ಅಧ್ಯಾರೋಪ–ಅಪವಾದ'' ಎಂಬ ಒಂದೇ ಪ್ರಕ್ರಿಯೆ. ''ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ''

(ಗೀ. 13–12) ನಿಷ್ಪ್ರಪಂಚನಾದ ಆತ್ಮನನ್ನು ಅಧ್ಯಾರೋಪಗಳನ್ನು ಅಪವಾದ ಮಾಡುವ ಮೂಲಕ ಎಂದರೆ ಅಲ್ಲಗಳೆಯುವ ಮೂಲಕವೇ ತಿಳಿಸಿಕೊಡಲಾಗುತ್ತದೆ ಎಂಬುದೇ ಇದರ ಅರ್ಥವು. ಇದೇ 'ವೇದಾಂತ ಸಂಪ್ರದಾಯ' ಎಂಬುದನ್ನು ಆಚಾರ್ಯರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಆತ್ಮಸ್ವರೂಪವು ನಿತ್ಯ–ನಿಷ್ಪ್ರಪಂಚ–ನಿರ್ಧರ್ಮಕ–ನಿರ್ಗುಣ–ಏಕಮೇವ – ಅದ್ವಿತೀಯವಾಗಿಯೇ ಇದೆ. ಹೀಗಿದ್ದರೂ ವ್ಯಾವಹಾರಿಕವಾಗಿ ನಮ್ಮ ಬುದ್ಧಿಗೆ ಸ್ವರೂಪದ ಬಗ್ಗೆ ಸರಿಯಾದ ಜ್ಞಾನವಿಲ್ಲದಿರುವುದರಿಂದ ಅದೇ ಆತ್ಮಸ್ವರೂಪವೇ ಅವಸ್ಥೆಗಳಂತೆ, ಪ್ರಪಂಚದಂತೆ ತೋರತೊಡಗುತ್ತದೆ. ಹೀಗೆ ಅವಿದ್ಯೆಯಿಂದ ಇದ್ದಂತೆ ತೋರುವ ಹುಸಿತೋರಿಕೆಗಳನ್ನು ವೇದಾಂತಶಾಸ್ತ್ರವು ಬೋಧಸೌಕರ್ಯಕ್ಕಾಗಿ ಮೊದಲು ಅವು ಇದ್ದುಬಿಟ್ಟವೆ ಎಂದು ಒಪ್ಪಿಕೊಂಡು ಬೋಧವನ್ನು ಆರಂಭಿಸುತ್ತವೆ. ಇದನ್ನೇ 'ಅಧ್ಯಾರೋಪ' ಎನ್ನುತ್ತಾರೆ. ಈ ಹುಸಿತೋರಿಕೆಗಳನ್ನಲ್ಲಗಳೆದು ಪರಮಾರ್ಥತತ್ತ್ವವನ್ನು ಬೋಧಿಸಿದಾಗ ಅಧ್ಯಾರೋಪದಲ್ಲಿ ಒಪ್ಪಿದ ಯಾವುದೂ ಯಾವಾಗಲೂ ಇರಲೇ ಇಲ್ಲವೆಂಬುದು ಜಿಜ್ಞಾಸುವಿನ ಅನುಭವಕ್ಕೇ ಗೋಚರವಾಗುವುದು. ಇದನ್ನೇ 'ಅಪವಾದ' ಎನ್ನುತ್ತಾರೆ. ಇದೊಂದೇ ಪ್ರಕ್ರಿಯೆಯು ವೇದಾಂತದಲ್ಲಿ ಹಾಸುಹೊಕ್ಕಾಗಿ ಎಲ್ಲ ಪ್ರಕ್ರಿಯೆಗಳಲ್ಲಿಯೂ ಇರುತ್ತದೆ. ಆದ್ದರಿಂದಲೇ ಕೇವಲಾತ್ಮಸ್ವರೂಪವನ್ನೇ ತೋರಿಸುವಾಗ ಈ ಮೊದಲು ತೋರಿಸಿದ್ದನ್ನು 'ಇದಲ್ಲ – ಇದಲ್ಲ' ಎಂದೇ ಹೇಳತೊಡಗುತ್ತದೆ. ಈ ಮಾತನ್ನು ಆಚಾರ್ಯರು ಹೀಗೆ ಹೇಳಿದ್ದಾರೆ. **''ಯದಾ ಪುನಃ ಸ್ವರೂಪಮೇವ ನಿರ್ದಿದಿಕ್ಷಿತಂ ಭವತಿ ನಿರಸ್ತ ಸರ್ವೋಪಾಧಿ ವಿಶೇಷಮ್ ತದಾ ನ ಶಕ್ಯತೇ ಕೇನಚಿದಪಿ ಪ್ರಕಾರೇಣ ನಿರ್ದೇಷ್ಟುಮ್ । ತದಾ ಅಯಮೇವ ಅಭ್ಯುಪಾಯೋ ಯದುತ ಪ್ರಾಪ್ತನಿರ್ದೇಶಪ್ರತಿಷೇಧ ದ್ವಾರೇಣ 'ನೇತಿ ನೇತಿ' ಇತಿ ನಿರ್ದೇಶಃ''** (ಬೃ. 2–3–6 ಭಾ.ಭಾ. 348) . ಯಾವಾಗ ಸ್ವರೂಪವನ್ನೇ

ತೋರಿಸಿಕೊಡಬೇಕೋ ಆಗ ಅದನ್ನು ಯಾವ ಪ್ರಕಾರದಿಂದಲೂ ತೋರಿಸಲಾಗುವುದಿಲ್ಲ. ಆಗ ಉಳಿದಿರುವ ಉಪಾಯವೇ ನೆಂದರೆ ಈ ಮೊದಲು ಯಾವುದನ್ನು ಉಪಾಯವಾಗಿ ಒಪ್ಪಿಕೊಂಡಿತ್ತೋ ಅದನ್ನು 'ಇದಲ್ಲ – ಇದಲ್ಲ' ಎಂದು ಅಲ್ಲಗಳೆಯುವದೊಂದೇ ಉಪಾಯವು ಎಂಬುದು ಇದರ ಅರ್ಥವು. ಇದೇ ಅಧ್ಯಾರೋಪಾಪವಾದ ಪ್ರಕ್ರಿಯೆಯ ಸ್ವರೂಪವು.

## ಇಲ್ಲಿರುವ ರಹಸ್ಯ

ಆತ್ಮವಿಜ್ಞಾನವೆಂದರೆ ತಾನೇ ಆತ್ಮನಾಗಿ ಉಳಿಯುವದು – ಎಂಬ ಅನುಭವ. ತನ್ನಿಂದ ತಿಳಿಯಲ್ಪಡುವ ಅನ್ಯವಸ್ತುವು ಆತ್ಮನಲ್ಲ. ಆತ್ಮನೆಂದರೆ ತಾನೇ. ಹೀಗಿರುವುದರಿಂದ ತನ್ನ ನಿಜಸ್ವರೂಪವನ್ನರಿಯದಾಗ ತನ್ನಲ್ಲಿ ಇರುವಂತೆ ತೋರುವ (ಅವಿದ್ಯಾಕಲ್ಪಿತಗಳಾದ ಹುಸಿತೋರಿಕೆ) ದೃಶ್ಯಗಳಲ್ಲಿ ಉದಾಹರಣೆಗೆ –ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಲ್ಲಿ 'ನಾನು' (ಅಥವಾ ನನ್ನದು) ಎಂಬ ತಪ್ಪುತಿಳಿವಳಿಕೆಯನ್ನು ಮಾಡಿ ಕೊಳ್ಳುತ್ತಾನೆ. ಆಗ ಆತ್ಮನಲ್ಲದವುಗಳು ನಿಜವಾಗಿರುವಂತೆ ಕಾಣುತ್ತವೆ. ಉದಾಹರಣೆಗೆ, ಪ್ರಪಂಚ, ಅವಸ್ಥೆ, ಮುಂತಾದವುಗಳು ನಿಜವಾಗಿರುವಂತೆ ಕಾಣುತ್ತವೆ. ಆದರೆ ಯಾವಾಗ ನಿಜವಾದ 'ತಾನು' ಅಂದರೆ ಅಹಂ ಪ್ರತ್ಯಯದವರೆಗಿನ ಯಾವದೂ ಅಲ್ಲ ಎಂದು ಅಲ್ಲಗಳೆದಾಗ ಜಿಜ್ಞಾಸುವು ಬರೀ ತಾನಾಗಿ ಉಳಿದುಕೊಳ್ಳುತ್ತಾನೆ. ಆಗ ಅವನ ಅಂತಃಕರಣವು ಆ ನಿಜಸ್ವರೂಪದಂತೆಯೇ ಭಾಸವಾಗತೊಡಗುತ್ತದೆ. ಇದನ್ನೇ ಆತ್ಮಪ್ರತ್ಯಯ ಆತ್ಮಜ್ಞಾನ ಎನ್ನುತ್ತಾರೆ. ಆದ್ದರಿಂದ ಆತ್ಮನನ್ನು ವಿಷಯೀಕರಿಸಿ ಅರಿಯುವದು ಎಂಬರ್ಥದಲ್ಲಿ ಆತ್ಮಜ್ಞಾನ ಎಂಬ ಶಬ್ದವು ಬಂದಿಲ್ಲ, ಅನಾತ್ಮದಲ್ಲಿಯ ಆತ್ಮಬುದ್ಧಿಯನ್ನು ಬಿಟ್ಟಾಗ ತಾನೇ ಆತ್ಮನಾಗಿ ಉಳಿದಿರುತ್ತಾನೆ. ಇದೇ ಆತ್ಮಜ್ಞಾನದ ರಹಸ್ಯವು. ಈ ರಹಸ್ಯವನ್ನರಿಯುವುದಕ್ಕಾಗಿಯೇ

ಅನುಭವಿಗಳಾದ ಗುರುಗಳ ಬೋಧನ ಸಹಾಯದಿಂದ ಮನನಮಾಡುವ ಪ್ರಕ್ರಿಯೆಗಳನ್ನು ತಿಳಿದುಕೊಂಡು ಜಿಜ್ಞಾಸುವು ತನ್ನಲ್ಲಿ ತಾನು ಅನುಭವ ಪೂರ್ವಕವಾಗಿ ''ಮನನ'' ವೆಂಬ ಸಾಧನೆಯನ್ನವಲಂಬಿಸಿ ಕೇವಲಾತ್ಮ ಸ್ವರೂಪನಾಗಿರುವುದನ್ನು ಲಕ್ಷಿಸಿ ಕೃತಕೃತ್ಯನಾಗಬೇಕು. ಇದೇ ''ಮನನ'' ಎಂಬ ಸಾಕ್ಷಾತ್ ಸಾಧನೆಯ ಸ್ವರೂಪವು. ಕೇವಲ ಶ್ರವಣಮಾತ್ರಕ್ಕೇ ಸ್ವರೂಪನಿಷ್ಠೆ ಬಾರದಿದ್ದಲ್ಲಿ ಶ್ರವಣವಾದ ಬಳಿಕ ಈವರೆಗೆ ತಿಳಿಸಿರುವ ಮನನವೆಂಬ ಸಾಧನೆಯನ್ನು ಉಪಯೋಗಿಸಿ ಸ್ವರೂಪನಿಷ್ಠನಾಗಬೇಕು.

## ನಿದಿಧ್ಯಾಸನದ ಅವಶ್ಯಕತೆ

ಈವರೆಗೆ ಸಾಕ್ಷಾತ್ ಸಾಧನೆಗಳಾದ ಶ್ರವಣ, ಮನನಗಳನ್ನು ಕುರಿತು ತಿಳಿಸಲಾಗಿದೆ. ಹೀಗೆ ಮನನದಿಂದಲೂ ಸ್ವರೂಪನಿಷ್ಠೆಯು ಬಾರದಿದ್ದಲ್ಲಿ 'ನಿದಿಧ್ಯಾಸನ' ಅಥವಾ 'ಅಧ್ಯಾತ್ಮಯೋಗ' ಎಂಬ ಸಾಧನೆಯನ್ನು ಅವಲಂಬಿಸಬೇಕು. 'ಸ್ವರೂಪನಿಷ್ಠೆ' ಎಂದರೆ ನಾನೆಂಬ ಅನಿಸುವಿಕೆ ಮೊದಲುಗೊಂಡು ಸಮಗ್ರ ಪ್ರಪಂಚವು ಅಂತಃಕರಣ, ಇಂದ್ರಿಯಗಳ ದೃಷ್ಟಿಯಿಂದ ತೋರುತ್ತಿದ್ದರೂ ಅದನ್ನೆಲ್ಲವನ್ನೂ ಆತ್ಮವ್ಯಾಪ್ತವಾಗಿಕಂಡು ದೃಶ್ಯವನ್ನೆಲ್ಲಾ ಬಾಧಿಸಿತೋರಿದರೂ ನಿಜವಾಗಿಲ್ಲವೆಂದು ನಿಶ್ಚಯಿಸಿ ಗಾಢ ನಿದ್ರೆಯಲ್ಲಿರುವಂತೆ ಈಗಲೂ ನಿರ್ವಿಶೇಷ ಚಿನ್ಮಾತ್ರನಾಗಿ ನಿಂತಿರುವುದನ್ನು ಸಹಜವಾಗಿ ಅಂತಃಕರಣವು ಅಪ್ರಯತ್ನವಾಗಿ ತೋರುತ್ತಿರಬೇಕು. ಇದನ್ನೇ ''ಜ್ಞಾನನಿಷ್ಠೆ – ''ಸ್ವರೂಪನಿಷ್ಠೆ'' ಎನ್ನುತ್ತಾರೆ. ಈ ನಿಲುಮೆ ಮನನದಿಂದ ಬಾರದಿದ್ದಲ್ಲಿ ನಿದಿಧ್ಯಾಸನವನ್ನು ಉಪಯೋಗಿಸಬೇಕು.

ಈ ನಿದಿಧ್ಯಾಸನದ ಸ್ವರೂಪವನ್ನು ''ಅಧ್ಯಾತ್ಮಯೋಗ'' ಎಂಬ ಹೆಸರಿನಿಂದ ಈ ಮುಂದೆ ತೋರಿಸಿ ಕೊಡಲಾಗುತ್ತದೆ.

# ಅಧ್ಯಾತ್ಮಯೋಗ ಅಥವಾ ನಿದಿಧ್ಯಾಸನ

## ವಿಚಾರಿಸುವ ಅಂಶಗಳು

ಏಕಾಂತದಲ್ಲಿ ಕುಳಿತು ಈ ಕೆಳಗಿನ ಸಂಗತಿಗಳನ್ನು ನಿಮ್ಮ ಅನುಭವಕ್ಕೆ ಹೊಂದಿಸಿಕೊಂಡು ಹಾಗಿದೆಯೇ ಇಲ್ಲವೇ ? ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಿರಿ. ಸಂಶಯ ಬಂದಲ್ಲಿ ಬಲ್ಲವರನ್ನು ಕೇಳಿ ತಿಳಿಯಲು ಯತ್ನಿಸಿರಿ.

1. ನಮಗೆ ಹೊರಗಿನ ವಿಷಯಗಳು (External objects) ಇವೆ ಎಂಬುದಕ್ಕೆ ನಮ್ಮ ಇಂದ್ರಿಯಗಳೇ ಪ್ರಮಾಣಗಳಾಗಿವೆ. ಇಂದ್ರಿಯಗಳಿಗೆ ವೇದ್ಯವಾಗದ ವಿಷಯಗಳು ಹೊರಗೆ ಇವೆ ಎಂಬ ಮಾತು ಅರ್ಥವಿಲ್ಲದ್ದು.

2. ಇಂದ್ರಿಯಗಳು ಒಳಗಿವೆ. ವಿಷಯಗಳು ಹೊರಗಿವೆ. ಇಂದ್ರಿಯಗಳು ವಿಷಯಗಳನ್ನು ಗ್ರಹಿಸುವಾಗ ಆಯಾ ವಿಷಯಗಳನ್ನು ವ್ಯಾಪಿಸಿ ದೇಶಕಾಲಕಾರ್ಯಕಾರಣಭಾವಗಳಿಂದೊಡಗೂಡಿ ಜ್ಞಾನಮಾಡಿಕೊಳ್ಳುತ್ತವೆ. ಏಕೆಂದರೆ ವಿಷಯಗಳೆಲ್ಲಾ ಈ ಸಂಬಂಧದಿಂದಲೇ ಇರುವವಾದ್ದರಿಂದ ಹಾಗೆಯೇ ತಿಳಿಯಬೇಕಾಗುವುದು. ಆದರೆ ವಿಷಯಗಳು ಮಾತ್ರ ಇಂದ್ರಿಯಗಳನ್ನು ಎಂದೂ ತಿಳಿಯಲಾರವು.

3. ಮನಸ್ಸು ಇಂದ್ರಿಯಗಳೆಲ್ಲವನ್ನೂ ಒಟ್ಟಾರೆ ತಿಳಿಯಬಲ್ಲದು. ಇಂದ್ರಿಯಗಳಿರುವುದಕ್ಕೆ ಮನಸ್ಸೇ ಪ್ರಮಾಣವು. ಮನಸ್ಸು ಒಳಗಿದೆ. ಇಂದ್ರಿಯಗಳು ಹೊರಗಿವೆ.

4. ಮನಸ್ಸು ಇಂದ್ರಿಯಗಳನ್ನು ವ್ಯಾಪಿಸುತ್ತದೆ. ಇಂದ್ರಿಯಗಳು ಮನಸ್ಸನ್ನು ವ್ಯಾಪಿಸಲಾರವು. ಮನಸ್ಸು ಆಲೋಚಿಸಬಲ್ಲದು, ಇಂದ್ರಿಯಗಳು ಈ ಕೆಲಸ ಮಾಡಲಾರವು.

5. ಮನಸ್ಸನ್ನು ಬಿಟ್ಟರೆ ಇಂದ್ರಿಯಗಳಿಗೆ ಅಸ್ತಿತ್ವವೇ ಇಲ್ಲ. ಮನಸ್ಸೇ ಗೋಳಕಗಳಲ್ಲಿ ಬಂದಾಗ ಇಂದ್ರಿಯವೆನಿಸುತ್ತದೆ. ಆದ್ದರಿಂದ ವಿಷಯ ಹಾಗೂ ಇಂದ್ರಿಯಗಳಿಗೆ ಮನಸ್ಸೇ ''ಆತ್ಮವು''.

6. ನಿಶ್ಚಯಮಾಡುವ ಬುದ್ಧಿಯನ್ನುಳಿದು ಮನಸ್ಸೆಂಬುದಿಲ್ಲ. ಬುದ್ಧಿ ಒಳಗಿದೆ. ಮನಸ್ಸು ಹೊರಗಿದೆ. ಬುದ್ಧಿಯು ನಿಶ್ಚಯಿಸಬಲ್ಲದು. ಮನಸ್ಸಿಗೆ ಈ ಶಕ್ತಿ ಇಲ್ಲ. ಬುದ್ಧಿಯು ತನ್ನ ಮುಂದಿರುವ ಮೂರನ್ನೂ ಏಕಕಾಲಕ್ಕೆ ವಿಷಯೀಕರಿಸುತ್ತದೆ. ಆದ್ದರಿಂದ ಮನಸ್ಸು ಮೊದಲಾದ ಮೂರಕ್ಕೂ ಬುದ್ಧಿಯೇ ''ಆತ್ಮ'.

7. ''ನಾನು'' ಎಂಬುದಿಲ್ಲದೆ ಬುದ್ಧಿಗೆ ಅಸ್ತಿತ್ವವಿಲ್ಲ. ನಾನೇ ಬುದ್ಧಿಯಾಗಿ ನಿಶ್ಚಯಿಸುವೆನು. ಮನಸ್ಸಾಗಿ ಆಲೋಚಿಸುವೆನು, ಇಂದ್ರಿಯಗಳಾಗಿ ನೋಡುವೆನು.

8. ''ನಾನು'' ಭೋಕ್ತೃವು. ಬುದ್ಧಿಗೆ ಭೋಗಮಾಡಲುಬಾರದು. ಬುದ್ಧ್ಯಾದಿ ಮುಂದಿನ ಎಲ್ಲವುಗಳನ್ನೂ ''ನಾನು'' ವಿಷಯೀಕರಿಸುತ್ತೇನೆ. ಇವು ಯಾವುದರಿಂದಲೂ ''ನಾನು'' ಎಂಬುದನ್ನು ವಿಷಯೀಕರಿಸ ಲಾಗುವುದಿಲ್ಲ.

9. ಪ್ರಮಾಣವ್ಯವಹಾರವೆಲ್ಲಕ್ಕೂ ''ನಾನು'' ಎಂಬುದೇ (ಪ್ರಮಾತೃವೇ) ಆಧಾರ. ಪ್ರಮಾಣಗಳಿಂದ 'ನಾನು' ಸಿದ್ಧವಾಗಿಲ್ಲ. ''ನಾನು''ವಿನಿಂದಲೇ ಪ್ರಮಾಣಗಳೆಲ್ಲಾ ಸಿದ್ಧವಾಗಿವೆ. ಎಂತಲೇ ''ನಾನಿದೇನೆ'' ಎಂಬ ಬಗ್ಗೆ ಯಾರಿಗೂ ಸಂಶಯವು ಎಂದೂ ಬರುವದೇ ಇಲ್ಲ. ಅಂತೂ ಸರ್ವ ವ್ಯವಹಾರಕ್ಕೂ ಈ ''ನಾನು'' ಎಂಬುದೇ ಆಧಾರ – ''ಆತ್ಮ''ವಾಗಿದೆ. ಯಾವುದೇ ''ಇದೆ'' ಎನ್ನಬೇಕಾದರೆ ಮೊದಲು ''ನಾನು'' ಇದ್ದೇ ತೀರಬೇಕು. ಇದಿಲ್ಲದೆ ಇನ್ನೊಂದೆಂಬುದಿರಲೇ ಆರದು.

10. ನಮಗೆ ಎಚ್ಚರದಲ್ಲಿ ''ನಾನು'' ಹಾಗೂ ಇದಕ್ಕೆ ಹೊಂದಿ ಕೊಂಡಿರುವ ಸಮಗ್ರ ಪ್ರಪಂಚವೆಲ್ಲವೂ (1) ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ ಮೊದಲಾದ ಆಧ್ಯಾತ್ಮಿಕಪ್ರಪಂಚ (2) ಆಕಾಶ, ವಾಯು, ಅಗ್ನಿ, ಜಲ, ಭೂಮಿ, ಅನೇಕ ಜನಗಳು ವಿಷಯಗಳು ಮೊದಲಾದ ಆಧಿಭೌತಿಕಪ್ರಪಂಚ (3) ಸೂರ್ಯ, ಚಂದ್ರ, ಗ್ರಹ, ನಕ್ಷತ್ರಲೋಕ

ಲೋಕಾಂತರಗಳಾದ ಆಧಿದೈವಿಕಪ್ರಪಂಚ, (4) ನಿನ್ನೆ ಮೊನ್ನೆ ಇಂದು ನಾಳೆ ವರ್ಷ ಯುಗ ಎಂಬ ಅನಂತ ಕಾಲವೂ (Time) (5) ಮೇಲೆ ಕೆಳಗೆ ಹಿಂದೆ ಮುಂದೆ ಅಲ್ಲಿ ಇಲ್ಲಿ ಎಂಬ ಅನಂತವಾದ ದೇಶವೂ (Space) (6) ಇವುಗಳಿಗನುಸರಿಸಿದ ಕಾರ್ಯಕಾರಣಭಾವಗಳೂ ಕಾಣುತ್ತಿರುತ್ತವೆ.

11. ಕನಸ್ಸಿನಲ್ಲಿಯೂ ಮೇಲೆ ವರ್ಣಿಸಿದ ರೀತಿಯಲ್ಲಿ ಅಲ್ಲಿದ್ದ ''ನಾನು'' ವನ್ನನುಸರಿಸಿ ಎಚ್ಚರದಂತೆಯೇ ಸರ್ವವೂ ತೋರಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಎಂದರೆ ಎಚ್ಚರಕನಸುಗಳಲ್ಲಿ ಒಂದು ತೋರುವಾಗ ಇನ್ನೊಂದು ತೋರಲಾರದು. ಇಷ್ಟೇ ಅಲ್ಲ ಎಲ್ಲಿಯೂ ಇರಲೇ ಆರದು.

12. ಇನ್ನು ಗಾಢನಿದ್ರೆಯಲ್ಲಿ ಈ 'ನಾನು' ಮೊದಲುಗೊಂಡು ಇದರ ಈ ಯಾವಪರಿವಾರವೂ ಇರುವುದಿಲ್ಲ ಎಂಬುದು ಸರ್ವರಿಗೂ ಅನುಭವ ಗಮ್ಯವಾದದ್ದು.

13. ಈ ಅನುಭವವನ್ನು ನಾನು ಈಗಿನ ಎಚ್ಚರದ ನಾನಿನಿಂದ ಇದರ ಸಾಧನೆಗಳಾದ ಬುದ್ಧಿ ಮನಸ್ಸು ಮಾತುಗಳ ಮುಖಾಂತರ ಹೊರಪಡಿಸುವೆ ವಾದರೂ ಈ ಅನುಭವವು ಮಾತ್ರ ಈ ನಾನಿನ ಕ್ಷೇತ್ರಕ್ಕೆ ಸೇರಿದ್ದಲ್ಲ. ಏಕೆಂದರೆ ''ನಾನು'' ಎಂಬುದಿದ್ದಿಲ್ಲ ಎಂಬುದೇ ಆ ಅನುಭವವಾಗಿದೆ. ಆದ್ದರಿಂದ ಇದು ಈಗಿನ ನಾನಿಗೆ ಸೇರಿದ್ದಲ್ಲವೆಂಬುದು ಸ್ಪಷ್ಟವೇ ಇದೆ.

14. ಎಚ್ಚರಕನಸುಗಳಲ್ಲಿ ಒಂದೊಂದು ಬಗೆಯ ''ನಾನು'' ಇರುವು ದನ್ನೂ ನಿದ್ರೆಯಲ್ಲಿ ಅದಾವುದೂ ಇಲ್ಲದ್ದನ್ನೂ ಹೇಳುವ ಈ ಅನುಭವವು ಇಂದ್ರಿಯ ಬುದ್ಧಿ ಮನಸ್ಸು ನಾನು ಮುಂತಾದವುಗಳಲ್ಲಿ ಏತಕ್ಕೂ ಒಳ ಪಟ್ಟಿದ್ದಲ್ಲ. ಈ ಅನುಭವಕ್ಕೆ ''ತಾನು'' ಎಂಬ ಹೆಸರನ್ನು ಸದ್ಯಕ್ಕೆ ವಿಷಯವನ್ನು ತಿಳಿಯುವ ಸೌಲಭ್ಯಕ್ಕೋಸ್ಕರ ಇಟ್ಟುಕೊಳ್ಳೋಣ.

ಈಗ ನೀವು ನಿಮ್ಮ ಬುದ್ಧಿಯಿಂದ ಹೊರಗಿನ ವಿಷಯಗಳ ಬಗ್ಗೆ ಹಾಗೂ ನಾನಿನ ಬಗ್ಗೆ ವಿಚಾರಿಸುವುದನ್ನು ನಿಲ್ಲಿಸಿ ಸದ್ಯ ಸ್ವಲ್ಪ ಸಮಯವಾದರೂ ಈ 'ತಾನು' ಎಂಬ ಅನುಭವದ ಸ್ಮರಣೆಮಾಡಿಕೊಂಡು ಅತ್ತ ಗಮನಿಸಿರಿ.

15. ನಿದ್ರೆಯಲ್ಲಿ ನೀವಿರುವ ಬಗೆಯನ್ನು ಕುರಿತು ವಿಚಾರಿಸಲು ಹೊರಡಿರಿ ಹಾಗೂ ಅಲ್ಲಿದ್ದ ಅನುಭವವನ್ನು ಸರಿಯಾಗಿ ಈ ಬುದ್ಧಿಯಲ್ಲಿ ಇಳಿಸಿ ಕೊಳ್ಳಿರಿ.

16. ಈಗ ನಿಮ್ಮಲ್ಲಿ ಮೊದಲಿಲ್ಲದ ಹೊಸದೊಂದು ವೃತ್ತಿಯು ಹುಟ್ಟುತ್ತದೆ. ಅದೇನೆಂದರೆ 'ನಾನು' ಹಾಗೂ ಅದರ ಪರಿವಾರವಿಲ್ಲದೆಯೇ 'ತಾನು' ಇದೇನೆ. ಇದಕ್ಕೆ ನಿದ್ರೆಯೆ ಪ್ರಮಾಣ. ಆ 'ತಾನು' ಇದ್ದರೆ ಎಚ್ಚರವಾಗಲಿ ಕನಸಾಗಲಿ ಇರುತ್ತದೆ. ಆದರೆ ಎಚ್ಚರವಿಲ್ಲದಿದ್ದರೂ ಕನಸಿಲ್ಲ ದಿದ್ದರೂ ಸ್ವತಂತ್ರವಾಗಿ ''ತಾನು'' ಇದ್ದೇ ಇದೆ ಎಂಬ ವೃತ್ತಿಯನ್ನು ಗಟ್ಟಿಯಾಗಿ ಪಟ್ಟು ಹಿಡಿಯಿರಿ.

17. ಈ ಹಿಂದೆ 'ನಾನು' ಎಂಬುದು ನ್ಯಾಯಾಧೀಶನಾಗಿ ತನ್ನೆದುರಿನ ಎಲ್ಲಕ್ಕೂ ನಿರ್ಣಯಕೊಡುತ್ತಿತ್ತಲ್ಲವೇ ? ಈಗ ಈ ''ತಾನು'' ಎಂಬ ಅನುಭವವನ್ನನುಸರಿಸಿದ ವೃತ್ತಿಯನ್ನು ನ್ಯಾಯಾಧೀಶನ ಸ್ಥಾನಕ್ಕೆ ಕೂಡಿಸಿ ಈ ''ನಾನು'' ವನ್ನು ಕೆಳಗೆ (Witness Box) ಆರೋಪಿಸ್ಥಾನದಲ್ಲಿ ನಿಲ್ಲಿಸಿ. ಈ ಕೆಳಗಿನ ನಿರ್ಣಯಗಳು ಬರುವವರೆಗೂ ಮತ್ತೆಮತ್ತೆ ವಿಚಾರ ಮಾಡುತ್ತಲೂ ಅನುಭವದಲ್ಲಿ ನಿಂತು ನಿಂತು ನೋಡುತ್ತಲೂ ಮೊದಲು ಸಾಕಿಕೊಂಡ ಗಟ್ಟಿಯಾಗಿರುವ ಪೂರ್ವಾಗ್ರಹಗಳನ್ನು ಸಡಿಲಿಸುತ್ತಲೂ ಇದಕ್ಕೆ ಪೋಷಕ ವಾಗಿ ಈ ಕ್ರಮವನ್ನರಿತವರ ಸಂಗಶ್ರವಣಾದಿಗಳನ್ನು ಮಾಡುತ್ತಲೂ ''ನಾನು'' ಹಾಗೂ ಅದಕ್ಕೆ ಸಂಬಂಧಪಟ್ಟ ವಿಚಾರಗಳ ಚಿಂತೆಯಿಂದ ಈ ಪ್ರಸ್ತುತ ವಿಚಾರವು ಕೆಡದಂತೆ ಬಲ್ಲವರ ಸಲಹೆಯೊಂದಿಗೆ ಕರ್ಮಯೋಗ, ನಾಮ ಸ್ಮರಣೆ ಭಗವದ್ಭಾವನೆ, ಸರ್ವಕರ್ಮಸಮರ್ಪಣೆ, ವಿಷಯಭೋಗದಲ್ಲಿ ದೋಷದರ್ಶನ–ಮುಂತಾದ ಸಾಧನೆಗಳನ್ನು ಮಾಡುತ್ತಲೂ ಎಚ್ಚರದಿಂದಿರಿ. ಸಂತತ ಪ್ರಯತ್ನಿಸಿರಿ. ಧೈರ್ಯಗೆಡದಿರಿ. ಕೊನೆಗೆ ಈ ನಿರ್ಣಯಗಳು ಬಂದು ಅಲ್ಲಿಯೇ ನಿಶ್ಚಿತವಾಗಿ ನೆಲೆನಿಲ್ಲುವಿರಿ. ಯಾರು ಕರ್ಮಯೋಗ ಉಪಾಸನಾದಿ ಗಳನ್ನು ಈ ಜನ್ಮದಲ್ಲಿಯಾಗಲಿ ಜನ್ಮಾಂತರದಲ್ಲಾಗಲಿ ಮಾಡಿಕೊಂಡು

ಅಮಾನಿತ್ವಾದಿಗುಣಗಳನ್ನೂ ಶಮದಮಾದಿಸಾಧನೆಗಳನ್ನೂ ಹೊಂದಿದವರಾಗಿರುವರೋ ಅವರಿಗೆ ಈ ಯೋಗದಲ್ಲಿ ಸುಲಭವಾಗಿ ಪ್ರವೇಶವು ದೊರೆಯುತ್ತದೆ. ಯಾರಿಗೆ ಪ್ರಯತ್ನಿಸಿದರೂ ಈ ಯೋಗದಲ್ಲಿ ಗತಿಯು ಬರುವುದಿಲ್ಲವೋ ಅಂಥವರು ಪೂರ್ವಸಾಧನೆಗಳಲ್ಲಿ ಉಂಟಾಗಿರುವ ಕೊರತೆಯನ್ನು ಪೂರೈಸಿಕೊಳ್ಳಲು ಅವುಗಳನ್ನು ಬಲ್ಲವರ ಸಲಹೆಯೊಂದಿಗೆ ಆಚರಿಸುತ್ತಿರಬೇಕು. ಹಾಗೂ ಆತ್ಮವಿಚಾರದ ಶ್ರವಣಮನನಗಳನ್ನೂ ನಡೆಸುತ್ತಿರಬೇಕು. ಮನಸ್ಸು ಒಳಕ್ಕೆ ಬಂದಾಗ ಶ್ರವಣಾದಿಗಳನ್ನೂ ಮನಸ್ಸು ಬಾಹ್ಯಕ್ಕೆ ಬಂದರೆ ಕರ್ಮಯೋಗಾದಿಗಳನ್ನೂ ಆಚರಿಸುತ್ತಾ ಪ್ರಯತ್ನ ಮಾಡುತ್ತಿರಬೇಕು.

## ಅನುಭವಪೂರ್ವಕ ನಿರ್ಣಯಗಳು

1. 'ನಾನು' ಹೊರಗಿದೆ. 'ತಾನು' ಒಳಗಿದೆ ಎಂದರೆ ಎರಡು ಭಾಗ (Rooms) ಗಳಿದ್ದು ಒಂದು ಒಳಗಿದೆ ಇನ್ನೊಂದು ಹೊರಗಿದೆ ಎಂದರ್ಥವಲ್ಲ. ರಜತಪರದೆಯ ಮೇಲೆ ಚಲನಚಿತ್ರವೂ ಚಿತ್ರದ ಒಳಗೆ ಪರದೆಯೂ ಇದೆ ಎಂಬಂತೆಯೇ ಇವು ಇವೆ.

2. 'ತಾನು' ನಾನನ್ನು ವ್ಯಾಪಿಸಿದೆ. 'ನಾನು'ವನ್ನು ವಿಷಯೀಕರಿಸುತ್ತದೆ. ನಾನು ಇದ್ದದ್ದನ್ನೂ ಇಲ್ಲದ್ದನ್ನೂ ಅರಿಯುತ್ತದೆ. ಈ ನಾನು ಮಾತ್ರ ತಾನನ್ನು ಎಂದೂ ವಿಷಯೀಕರಿಸಲಾರದು. ಸೀಮೆಎಣ್ಣೆಯ ದೀಪದಮೇಲಿರುವ ಗಾಜು ದೀಪದಿಂದ ಬೆಳಗಲ್ಪಡುವದೇ ಹೊರತು ಗಾಜು ದೀಪವನ್ನು ಬೆಳಗಲಾರ ದೆಂಬಂತೆಯೇ ಇದೂ ಆಗಿದೆ.

3. ಎಚ್ಚರದಲ್ಲಿ ಸಿಕ್ಕು ಒದ್ದಾಡುವಂತಿರುವ 'ನಾನು' ಒಂದು ವಿಧ. ಸ್ವಪ್ನದಲ್ಲಿ ಸಿಕ್ಕುಬಿದ್ದಂತಿರುವ 'ನಾನು' ಇನ್ನೊಂದು ವಿಧ. ನಿದ್ರೆಯಲ್ಲಿ ಈ ಎರಡರಲ್ಲಿ ಯಾವುದೊಂದು ತೋರುವುದಿಲ್ಲ. ಈ ನಾನುಗಳು ಬಂದರೂ ಹೋದರೂ 'ತಾನು' ಮಾತ್ರ ತೋರದೆ ಅಡಗದೆ ಹೆಚ್ಚುಕಡಿಮೆಯಾಗದೆ ಇದ್ದೇ ಇದೆ.

4. 'ನಾನು' ಇರಬೇಕಿದ್ದರೆ ಇನ್ನೊಂದನ್ನವಲಂಬಿಸಿಯೇ ಇರಬೇಕು. ಉದಾ. ನಾವು, 'ನಾನು' ಎಂದಾಗ 'ಇಂಥವನು' ಎಂದು ಹೇಳಬೇಕಾಗುವುದು. ಆಗ ದೇಹ ಇಂದ್ರಿಯ ದೇಶ ಕಾಲ ಮನಸ್ಸು ಪ್ರಾಣ ಬುದ್ಧಿ ಮುಂತಾದವುಗಳಿಂದಲೇ ಇಂಥವನು ಎಂದಾಗಬೇಕು. ಆದ್ದರಿಂದ ಇನ್ನೊಂದಿರದೆ ನಾನು ಇರಲಾರದು. 'ತಾನು' ಮಾತ್ರ ಇವುಗಳಾವುದರ ಹಂಗೂ ಇಲ್ಲದೆ ಇವುಗಳಿಗೆಲ್ಲ ಆಶ್ರಯವಾಗಿ ಇರತಕ್ಕದ್ದು. ಆದ್ದರಿಂದ ಇದು ಬರಿ ಇರವು. ಇರವೇ ಇದರ ಸ್ವಭಾವ, ಸ್ವರೂಪ.

5. 'ನಾನು' ಏನನ್ನಾದರೂ ಅರಿಯಬೇಕಿದ್ದರೆ ಇಂದ್ರಿಯವೇ ಮುಂತಾದ ಸಾಧನೆಗಳಿಂದಲೂ ದೇಶಕಾಲಾದಿಗಳ ಮೂಲಕವೂ ಕಾರ್ಯಕಾರಣಾದಿ ಭಾವಸಮೇತವಾಗಿಯೂ ಮಾರ್ಪಾಡಾಗುತ್ತ ಅರಿತುಕೊಳ್ಳುತ್ತೇನೆ. ಆದರೆ 'ತಾನು' ನಾನನ್ನರಿಯುತ್ತದೆ ಎಂದಾಗ ಯಾವ ಸಾಧನೆಯೂ ಇಲ್ಲದೆ ನೇರಾಗಿ ಅರಿಯುವದಲ್ಲದೆ ತನ್ನಲ್ಲಿ ಯಾವ ವಿಕಾರವನ್ನೂ ಹೊಂದದೆ ಅರಿಯುತ್ತಿರುತ್ತದೆ. ನಾನು ಇಲ್ಲದಾಗಲೂ ಹಾಗೇ ಅರಿವಿನ ರೂಪವಾಗಿರುತ್ತದೆ. ಇದು ಅರಿಯವ ಕ್ರಿಯೆಯಲ್ಲ, ಸ್ವಭಾವ, ಸ್ವರೂಪ. 'ಬೆಟ್ಟವು ನಿಂತಿದೆ', 'ಸೂರ್ಯನು ಬೆಳಗುತ್ತಾನೆ' ಎಂಬುದು ಹೇಗೆ ಕ್ರಿಯೆಯಲ್ಲವೋ ಹಾಗೆಯೇ ಇದೂ ಕ್ರಿಯೆಯಲ್ಲ.

6. ನಾನು ತಿಳಿದಿಲ್ಲ, ನನಗೆಸಂಶಯವಿದೆ. ನಾನು ತಪ್ಪಾಗಿ ತಿಳಿದೆ. ನಾನು ಸರಿಯಾಗಿ ತಿಳಿಯತೊಡಗಿದ್ದೇನೆ. ಈಗ ಸರಿಯಾಗಿ ತಿಳಿದೆ. ಮೊದಲಿನ ಅಜ್ಞಾನ ಸಂಶಯಗಳು ಹೋದವು . –ಎಂಬ ವಿಕಾರಗಳು ಈ ನಾನಿನಲ್ಲಿ ಆಗೇ ಆಗುತ್ತಿರುತ್ತವೆ. ಆದರೆ ತಾನಿಗೆ ಮಾತ್ರ ಇವಾವುವೂ ಯಾವಾಗಲೂ ಇಲ್ಲ. ಭೂಮಿಯ ಮೇಲಿನವರಿಗೆ ಕತ್ತಲು, ಮಂದಪ್ರಕಾಶ, ಅರುಣೋದಯ, ಸಂಧ್ಯಾಕಾಲ, ಮಧ್ಯಾಹ್ನ, ರಾತ್ರಿಗಳಿವೆ. ಸೂರ್ಯನಲ್ಲಿ ಮಾತ್ರ ಇವಾವುವೂ ಇಲ್ಲವೆಂಬಂತೆಯೇ ಇದನ್ನೂ ತಿಳಿಯಬೇಕು.

7. ''ನಾನು'' ಏನಾದರೊಂದಾಗಬೇಕಿದ್ದರೆ ದೇಶ ಕಾಲ ಕಾರ್ಯ ಕಾರಣ ಭಾವಗಳ ನಿಯಮಗಳಿಗನುಸಾರವಾಗಿಯೇ ಸಾಧನೆಮಾಡಿ ತನ್ನಲ್ಲಿ ಹೆಚ್ಚು ಅಥವಾ ಕಡಿಮೆ ಮಾಡಿಕೊಂಡು ಆಗಬೇಕು. ಆದರೆ ''ತಾನು'' ಮಾತ್ರ ಇದಾವುದರ ಅವಶ್ಯಕತೆ ಇಲ್ಲದೆ ಏಕಕಾಲದಲ್ಲಿಯೇ ಎಲ್ಲವೂ ಆಗಿ ನಿಲ್ಲಬಲ್ಲದಲ್ಲದೆ ತನ್ನಲ್ಲಿ ಮಾರ್ಪಾಡಾಗದೆಯೇ ಎಲ್ಲವೂ ಆಗಿ ನಿಂತು ಹಾಗಾದಾಗಲೂ ''ತಾನು'' ಮೊದಲಿದ್ದಂತೆಯೇ ಇರಬಲ್ಲದಾಗಿದೆ.

8. ಕನಸೆಲ್ಲವೂ ತಾನೇ ಆಗಿದ್ದು ತನ್ನಲ್ಲಿ ಏನೂ ಮಾರ್ಪಾಡಿಲ್ಲದೆ ಅದೆಲ್ಲಾ ಆಗಿ ಆಗಲೂ ತಾನು ತಾನೇ ಆಗಿದ್ದು ಆ ತೋರಿಕೆ ಅಡಗಿದಾಗಲೂ ತಾನೇ ಆಗಿದ್ದಾನೆ. ಇದರಂತೆಯೇ ತಾನೇ ಎಚ್ಚರವೆಲ್ಲಾ ಆಗಿದ್ದು ಆಗಲೂ ''ತಾನು'' ತಾನೇ ಆಗಿದ್ದು ಯಾವಾಗಲೂ ಯಾವ ಮಾರ್ಪಾಡೂ ಆಗದೆಯೇ ಇದ್ದಾನೆ.

9. ಎಲ್ಲಿಯವರೆಗೆ ಈ ತಾನೆಂಬ ತತ್ತ್ವದ ಕಡೆ ನಾವು ಸರಿಯಾಗಿ ನೋಡುವದಿಲ್ಲವೋ ಅಲ್ಲಿಯವರೆಗೆ ಈ ''ತಾನೇ'' ಎಚ್ಚರಕನಸುನಿದ್ರೆ ಗಳಾಗಿರುವಂತೆ ಭಾಸವಾಗುತ್ತದೆ. ಇಲ್ಲಿ ಹೇಳಿರುವ ಪ್ರಕಾರ ತಾನೆಂಬ ಸ್ವರೂಪವನ್ನು ಲಕ್ಷಿಸಿದೊಡನೆಯೇ ಅವಸ್ಥೆಗಳಿಲ್ಲ. ಇರುವದೆಲ್ಲವೂ ''ತಾನೇ'' ಎಂಬ ಅರಿವು ಮಿಂಚುವದು.

10. ಈ ಮಿಂಚುವ ಅರಿವು ನಾನಿಗೇ ಸೇರಿದ್ದಾದರೂ ತಾನೆಂಬ ಅನುಭವವನ್ನಾಧರಿಸಿರುವ ವೃತ್ತಿಯಾದ್ದರಿಂದ ಇದು ಆತ್ಮಜ್ಞಾನ ಎನಿಸಿ ಕೊಳ್ಳುತ್ತದೆ (ಇದು ವೇದನ ಪ್ರತ್ಯಯಗಳಿಗೆ ಸೇರಿದ್ದಲ್ಲ). ಅಣ್ಣ ತಮ್ಮಂದಿರಿಬ್ಬರು ಭೀಮದುರ್ಯೋಧನರ ಪಾತ್ರವಹಿಸಿದಾಗ ವೇಷಹಾಕಿ ರಂಗಭೂಮಿಯ ಮೇಲೆಬಂದಾಗ ಒಬ್ಬರನ್ನೊಬ್ಬರು ದ್ವೇಷಿಸುವರು. ಒಳಗೆ ಹೋದಾಗ ವೇಷವಿದ್ದೂ ತಮ್ಮ ಸಂಸಾರದ ಮಾತುಗಳನ್ನಾಡುವಾಗ ವೇಷವು ಹೇಗೆ ಲೆಕ್ಕಕ್ಕಿಲ್ಲವೋ ಹಾಗೆಯೇ ಇಲ್ಲಿ ವೃತ್ತಿಯೂ ಲೆಕ್ಕಕ್ಕಿಲ್ಲ.

11. ತನ್ನನ್ನರಿಯದಿದ್ದುದೇ ''ನಿದ್ರೆ'' , ತನ್ನನ್ನು ಅವಸ್ಥೆಗಳೆಂದು ತಪ್ಪಾಗಿ ತಿಳಿದದ್ದೇ ''ಕನಸು'', ತನ್ನನ್ನು ವಿಚಾರಿಸಿ ಇದೆಲ್ಲವೂ ತಾನೇ ಹೊರತು ಇನ್ನೊಂದಿಲ್ಲ ಎಂಬ ನಿರ್ಣಯವು ಮಿಂಚುವ ಅರಿವೇ ''ಎಚ್ಚರ''.

12. ಇವು ಮೂರು ನಾನಿನಲ್ಲೇ ಬರತಕ್ಕದಾದ್ದರಿಂದಲೂ ತಾನಿಗೆ ಇದೇನೂ ಇಲ್ಲದ್ದರಿಂದಲೂ ಈ ಜ್ಞಾನವನ್ನು ಪಡೆದವನಿಗೆ 'ನಾನು' ಎಂಬುದು ಹೊರಟೇ ಹೋಗುವದು. ಎಂದರೆ 'ಇದೂ ಹುಸಿತೋರಿಕೆಯೇ ಆಗಿದೆ' ಎಂದು ಗೊತ್ತಾಗುವದು. ಕಾರಣ – ವೃತ್ತಿಯಲ್ಲಿಯ ಜ್ಞಾನಾಜ್ಞಾನ ಗಳೆರಡೂ ಅವಿದ್ಯೆಯ ಭೂಮಿಕೆಗೆ ಸೇರಿವೆ. ತಾನುವಿನಲ್ಲಿ ನಿಂತಾಗ ಇದೊಂದೂ ಇಲ್ಲ. ಹೀಗೆ ನೆಲೆನಿಂತಿರುವದನ್ನು ಜ್ಞಾನನಿಷ್ಠೆ ಪರಾಭಕ್ತಿ ಎಂದು ಕರೆಯುತ್ತಾರೆ. ಈಚೆಗೆ ಇದನ್ನು ಬ್ರಹ್ಮಾಕಾರವೃತ್ತಿ ಎಂದು ಕರೆಯುವ ರೂಢಿಯಿದೆ. ಆದರೆ ಇದು ವೃತ್ತ್ಯಾಕಾರಬ್ರಹ್ಮವೇ ಹೊರತು ಬ್ರಹ್ಮಾಕಾರ ವೃತ್ತಿಯಲ್ಲ. ಏಕೆಂದರೆ ವೃತ್ತಿಯು ಬ್ರಹ್ಮವನ್ನು ಎಂದೂ ವಿಷಯೀಕರಿಸಲಾರದು.

14. ತಾನು ತನ್ನನ್ನರಿಯದಿದ್ದುದಿಲ್ಲ, ಅರಿತದ್ದಿಲ್ಲ. ಅವುಗಳ ಫಲವಾದ ಸಂಸಾರ ಮೋಕ್ಷಗಳೆರಡೂ ತನಗಿಲ್ಲ. ಇಲ್ಲಿಗೆ ಮಾತುವಿಚಾರಗಳೆರಡೂ ನಿಂತಿರುವ ತಾನೇ ತುರೀಯನು. ಉಳಿದದ್ದೆಲ್ಲವೂ ಹುಸಿತೋರಿಕೆ.

ಈ ಮೇರೆಗೆ 'ನಾನು'ವಿನ ಸತ್ಯತತ್ವವು ತಾನೇ ಎಂದು ತಿಳಿದಾಗ (ತಾನೇ ನಿಜವಾದ 'ನಾನು' ಎಂದರಿತಾಗ) ಕಾಮಾದಿಭಾವಗಳಿಂದ ಸಂಪೂರ್ಣ ಬಿಡುಗಡೆಹೊಂದಿರುತ್ತೇವೆ. ಇದನ್ನೇ ಮೋಕ್ಷವೆಂದು ವ್ಯವಹರಿಸುತ್ತಾರೆ. (ಕರೆಯುತ್ತಾರೆ.)

ಆಗ ತನ್ನನ್ನು ತಿಳಿಯದಿರುವದೆಂಬ ಅವಿದ್ಯೆಯು ತಂದೊಡ್ಡಿದ ಜನ್ಮ ಮರಣ, ಕರ್ಮ, ಫಲ ಮುಂತಾದ ಪ್ರಪಂಚವೆಲ್ಲವೂ ಹುಸಿಯಾಗಿ ಬಿಡುವದರಿಂದ ಇವುಗಳಿಂದ ಬಿಡುಗಡೆಹೊಂದುತ್ತಾನೆಂಬುದು ಸಹಜ ವಾಗಿದೆ. ಇದೇ ಈ ಯೋಗದ ಫಲವು.

ಆದ್ದರಿಂದ ಮುಮುಕ್ಷುಗಳು ಇದನ್ನು ಸತತವೂ ಪ್ರಯತ್ನಪೂರ್ವಕವಾಗಿ ಸಾಧಿಸತಕ್ಕದ್ದು. ಈ ಅರಿವಿನಲ್ಲಿ ಸಹಜವಾಗಿ ನೆಲೆನಿಂತಿರುವದೇ ಜ್ಞಾನನಿಷ್ಠೆಯು. ಈ ಜ್ಞಾನನಿಷ್ಠೆಯು ಬರುವವರೆಗೂ ಸತತಪ್ರತಯತ್ನವು ಅತ್ಯವಶ್ಯ.

## ಪರಮಾರ್ಥದರ್ಶನಯೋಗ

ಯೋಗವೆಂದರೆ ಸಾಮಾನ್ಯವಾಗಿ ಪಾತಂಜಲಯೋಗವೆಂದೇ ಥಟ್ಟನೆ ಕೆಲವರಿಗೆ ಕಲ್ಪನೆಯಾಗುವ ಸಂಭವವಿದೆ. ಆದರೆ ಇಲ್ಲಿ ಹೇಳಿರುವ ಈ ಯೋಗವು ಅದಕ್ಕೆ ಸಂಬಂಧಿಸಿದ್ದಲ್ಲ. ಶ್ರೀಶಂಕರಾಚಾರ್ಯರು ಈ ಸಾಧನೆಯನ್ನು 'ಸಮಾಧಿಯೋಗ' ಎಂದು ಕರೆದು ಇದರ ಪರಿಪೂರ್ಣತೆಯನ್ನು 'ಪರಮಾರ್ಥದರ್ಶನಯೋಗ' ಎಂದೂ ಹೇಳಿದ್ದಾರೆ. ವೇದಾಂತದರ್ಶನದ ಸರಿಯಾದ ಕಲ್ಪನೆಯಿಲ್ಲದಿರುವ ಕೆಲವು ಜನರು ಇಲ್ಲಿ ಮೇಲೆ ಹೇಳಿದ ಸಮಾಧಿಯೋಗ ಎಂಬ ಶಬ್ದಕ್ಕೆ ಪಾತಂಜಲಯೋಗದಲ್ಲಿ ಹೇಳಿರುವ ಶಬ್ದಾನುವಿದ್ಧ, ದೃಶ್ಯಾನುವಿದ್ಧ, ಸಂಪ್ರಜ್ಞಾತ, ಸವಿಕಲ್ಪ, ನಿರ್ವಿಕಲ್ಪ ಮುಂತಾದ ಸಮಾಧಿಗಳೆಂದೇ ತಪ್ಪಾಗಿತಿಳಿದುಕೊಳ್ಳುವ ಸಂಭವವಿರುತ್ತದೆ. ಅಲ್ಲದೆ ಈಚೆಗೆ ವೇದಾಂತದಲ್ಲಿ ಸಪ್ತಭೂಮಿಕೆ, ಷಟ್‌ಚಕ್ರ, ನಾದಬಿಂದುಕಲಾ ಮೊದಲಾದ ಶತಯೋಗ ರಾಜಯೋಗಾದಿಗಳ ಸಾಧನೆಗಳನ್ನು ಸೇರಿಸಿಕೊಂಡು ಬೋಧಿಸುವ ಪದ್ಧತಿಗಳು ಬಂದಿರುವುದರಿಂದಲೂ ವೇದಾಂತಜ್ಞಾನದ ಪ್ರಾಪ್ತಿಗೆ ಇವೆಲ್ಲವೂ ಸಾಧನೆಗಳಾಗಿವೆ ಎಂದೇ ಅನೇಕ ಸಾಧಕರು ಭ್ರಮಿಸುತ್ತಾರೆ. ಆದರೆ ಅವೈದಿಕವೂ ಕರ್ತೃತಂತ್ರವೂ ಆಗಿರುವ ಪಾತಂಜಲಯೋಗಕ್ಕೂ, ವೈದಿಕವೂ ವಸ್ತುತಂತ್ರವೂ ಆಗಿರುವ ಈ ಯೋಗಕ್ಕೂ ಯಾವ ಸಂಬಧವೂ ಇರುವದಿಲ್ಲ. ಹೀಗಿದ್ದರೂ ಆಸನ ಪ್ರಾಣಾಯಾಮಪ್ರತ್ಯಾಹಾರಗಳು ಈ ಯೋಗಕ್ಕೂ ಪೋಷಕವಾಗಿರುತ್ತವೆ. ಆದ್ದರಿಂದಲೇ ಗೀತೆಯ 6ನೆಯ ಅಧ್ಯಾಯದಲ್ಲಿ ಅವುಗಳನ್ನು ಯೋಗಕ್ಕೆ ಸಹಾಯಕವಾಗಿ ಹೇಳಿದೆ. ಈ ಯೋಗದಲ್ಲಿ ಶ್ರವಣಮನನಗಳ ನಂತರ

ಮಾಡಬೇಕಾಗಿರುವ ಏಕಾಗ್ರತೆಯ ವಿಚಾರವೇ ಮುಖ್ಯವಾಗಿದೆಯೇ ಹೊರತು ಮಿಕ್ಕಿದ್ದೆಲ್ಲವೂ ಈ ಏಕಾಗ್ರತೆಗೆ ಸಹಾಯಕವಾಗಿರುವ ಮಟ್ಟಿಗೇ ಉಪಯುಕ್ತವಾಗಿವೆ.

ಶ್ರೀಗೌಡಪಾದರು ಮಾಂಡೂಕ್ಯಕಾರಿಕೆಗಳಲ್ಲಿ ಈ ಯೋಗದ ವಿಚಾರದ ಬಗ್ಗೆ ಹೇಳುವಾಗ ಇದಕ್ಕೊದಗುವ ಪ್ರತಿಬಂಧಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ತಿಳಿಸಿದ್ದಾರೆ. ಈ ಯೋಗವನ್ನಾಚರಿಸತಕ್ಕವರು ಅವುಗಳನ್ನು ತಿಳಿದಿರುವದು ಅವಶ್ಯ.

1. ವಿಕ್ಷೇಪ– ತತ್ತ್ವವನ್ನು ಏಕಾಗ್ರತೆಯಿಂದ ಲಕ್ಷಿಸುವಾಗ ಈ ಹಿಂದೆ ಹೇಳಿದ 'ತಾನು' ಎಂಬ ಅನುಭವವನ್ನು ಪಟ್ಟಾಗಿ ಹಿಡಿದುಕೊಳ್ಳದೆ ನಮ್ಮ ಮನಸ್ಸು 'ನಾನು' ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳ ಕಡೆಗೆ ಧಾವಿಸುವದೇ ವಿಕ್ಷೇಪ, ವಿಷಯಗಳಲ್ಲಿ ದೋಷದರ್ಶನವನ್ನೂ ಪ್ರಪಂಚದ ಹುಸಿತೋರಿಕೆಯನ್ನೂ ಮತ್ತೆಮತ್ತೆ ಮನಸ್ಸಿನಲ್ಲಿ ಹೊರಳಾಡಿಸುವದರಿಂದ ಇದನ್ನು ಕಳೆದುಕೊಳ್ಳಬೇಕು.

2. ಲಯ– ಈ ಯೋಗವನ್ನಾಚರಿಸುವಾಗ ನಿದ್ರೆ ಬರುವದನ್ನೇ 'ಲಯ' ಎನ್ನುತ್ತಾರೆ. ಇದನ್ನು ಮಿತಾಹಾರವಿಹಾರಗಳಿಂದಲೂ ಮನಸ್ಸನ್ನು ಮತ್ತೆಮತ್ತೆ ಎಚ್ಚರಿಸಿ ಸಾಧನೆಯಲ್ಲಿ ತೊಡಗಿಸುವದರಿಂದಲೂ ಪರಿಹರಿಸಿಕೊಳ್ಳಬೇಕು.

3. ಕಷಾಯ– ಏಕಾಗ್ರತೆಯಿಂದ ತತ್ತ್ವನಿರೀಕ್ಷಣೆಮಾಡುವಾಗ ಒಂದೊಂದು ಸಲ ನಮ್ಮ ಮನಸ್ಸು ಅನುಭವದಲ್ಲಿಯೂ ನಿಲ್ಲದೆ ವಿಷಯಗಳಲ್ಲಿಯೂ ತೊಡಗದೆ ತೆಪ್ಪಗೆ ನಿಂತಿರುತ್ತದೆ. ಇದು ವಿಕ್ಷೇಪಕ್ಕೆ ಬೀಜವಾಗಿದೆ. ಮನಸ್ಸನ್ನು ಮತ್ತೆಮತ್ತೆ ಎಚ್ಚರಿಸಿ ವಿಚಾರಕ್ಕೆ ತೊಡಗಿಸುವದೇ ಇದಕ್ಕೆ ಪರಿಹಾರ.

4. ರಸಾಸ್ವಾದ– ವಿವೇಕಪೂರ್ವಕವಾದ ವಿಚಾರಮಾಡುವಾಗ ಏಕಾಗ್ರತೆಯಿಂದ ಒಂದು ವಿಧವಾದ (ಇದೆಂಥ ದಿವ್ಯವಾದ ಅನುಭವ ಎಂದೀಬಗೆಯ) ಆನಂದವು ಮನಸ್ಸಿನಲ್ಲಿ ಮಿಂಚತೊಡಗುವುದು. ಇದೇ

ರಸಾಸ್ವಾದವು. ಇದನ್ನೂ ಸಹ ಮೀರಿ ಹೋದಾಗಲೇ ತತ್ತ್ವದಲ್ಲಿ ಸರಿಯಾಗಿ ನೆಲೆನಿಲ್ಲುವೆವು. ತಾನು ಎಂಬ ಸ್ವರೂಪದಲ್ಲಿ 'ತಿಳಿದೆ' 'ತಿಳಿಯಲಿಲ್ಲ' ಎಂಬ ಯಾವ ವೃತ್ತಿಗಳೂ ಇಲ್ಲವೆಂಬುದನ್ನು ಜ್ಞಾಪಿಸಿಕೊಂಡು ವೃತ್ತಿಯಲ್ಲಿ ಉಂಟಾಗುವ ಈ ಆನಂದವೂ ಸಹ ನಾನಿಗೇ (ಅಹಂಕಾರಕ್ಕೇ) ಸಂಬಂಧಿಸಿದ ಹುಸಿತೋರಿಕೆಯು ಎಂದು ನಿಶ್ಚಯಿಸುವದೇ ಇದರಿಂದ ಪಾರಾಗಲು ಉಪಾಯವು. ಹೀಗೆ ಈ ನಾಲ್ಕು ಪ್ರತಿಬಂಧಗಳನ್ನು ದಾಟಿ ಕೇವಲ ತಾನಾಗಿ ನಿಂತಾಗ ಈ ಯೋಗವು ಪೂರ್ತಿಯಾಯಿತು.

## ಅನುಭವವೂ ನೆಲೆನಿಲ್ಲುವಿಕೆಯೂ

ಅಧ್ಯಾತ್ಮಯೋಗದಲ್ಲಿ ''ಅನುಭವ'' ಎಂದರೆ –

1. ವಿಷಯಗಳನ್ನು ಇಂದ್ರಿಯಗಳಿಂದ ಮುಟ್ಟಿದಾಗ ಉಂಟಾಗುವ ಪ್ರತ್ಯಯವಲ್ಲ. 2. ಮನಸ್ಸಿನಲ್ಲುಂಟಾಗುವ ಕಾಮ, ಶಾಂತಿ, ಕ್ರೋಧ, ದಯೆ ಮುಂತಾದ ನಾನಾ ಬಗೆಯ ವೇದನೆಗಳಲ್ಲ. 3. ಏನಾದರೊಂದು ವಿಧದಿಂದ ಇದನ್ನು ಭಾವಿಸಲು ಕಲ್ಪಿಸಲು ಬರುವ ವಸ್ತುವಿಶೇಷವೂ ಇದಲ್ಲ. ಆದ್ದರಿಂದ ಈ ಅನುಭವಸ್ವರೂಪವನ್ನು ಭಾವಿಸಿಕೊಳ್ಳಲು ಹೊರಡಬಾರದು. ಇದು ಭಾವಾತೀತವು. ಇದು ಏತಕ್ಕೂ ವಿಷಯವಲ್ಲ. 4. ಸಾಧನೆಗಳನ್ನು ಮಾಡಿದ ನಂತರ ಕಾಲಾಂತರದಲ್ಲಿ ಬರುವ ಅಥವಾ ಉಪಾಸನಾದಿಗಳಿಂದ ಲೋಕಾಂತರಗಳಲ್ಲಿ ಬರುವ ನವೀನಾನುಭವಗಳಲ್ಲ. 5. ರಾಜಯೋಗ ಹಠಯೋಗಾದಿಗಳಲ್ಲಿ ಹೇಳಿದಂತೆ ಸಾಧಿಸಿದರೆ ಬರುವ ಹೊಸ ಅನುಭವಗಳಾದ ಸಿದ್ಧಿಗಳೇ ಮುಂತಾದವುಗಳ ಜಾತಿಗೆ ಇದು ಸೇರಿದ್ದಲ್ಲ. ಇದು ಯಾವುದೇ ಒಂದು ಅವಸ್ಥೆಗೆ ಒಳಪಟ್ಟಿದ್ದಲ್ಲ.

2.ಇದು ಎಲ್ಲರಲ್ಲಿಯೂ ಮೊದಲೇ ಇರುತ್ತಿದ್ದು ಇದರ ಬೆಳಕಿನಲ್ಲಿಯೇ ಎಲ್ಲ ಅವಸ್ಥೆಗಳೂ ವೇದನಪ್ರತ್ಯಯಗಳೂ ಬರುತ್ತಿರುವುದನ್ನು ಹೋಗುತ್ತಿರುವದನ್ನೂ ತಿಳಿಯುತ್ತೇವೆ. ಹಾಗೂ ಈ ಎಲ್ಲ ಭಾವಗಳೂ ಇಲ್ಲ

ದಿರುವದೂ ಸಹ ಈ ಅನುಭವದಿಂದಲೇ ತಿಳಿದುಬರುತ್ತದೆ. ಇದೇ ಅನುಭವದ ಸ್ವರೂಪ. ಇದನ್ನೇ "ಸಾಕ್ಷಿ" "ತಾನು" ಎಂದು ವೇದಾಂತದಲ್ಲಿ ಕರೆದಿರುತ್ತದೆ. ಆತ್ಮ ಎಂದರೆ "ತಾನು" ಎಂದು ಅರ್ಥ. ಅನುಭವ ಸ್ವರೂಪನೇ "ತಾನು."

3. ಜ್ಞೇಯವೆಲ್ಲವನ್ನೂ (ಹಿಂದೆ ಹೇಳಿದಂತೆ 'ನಾನು' ಎಂಬುದನ್ನೂ ಸಹ) ವಿಷಯೀಕರಿಸಿ ನೋಡುವಾಗ ಈ ಅನುಭವದಲ್ಲಿಯೇ ನಾವು ನಿಂತಿರುತ್ತೇವೆ. ಅದೇ ನಾವಾಗಿರುತ್ತೇವೆ. ಹಾಗೂ ಈಗಿನ ಈ ಬುದ್ಧಿವೃತ್ತಿಗಳ ಮುಖಾಂತರ ಅದನ್ನು ಹೊರಪಡಿಸುತ್ತವೆ. ಹೀಗಾದಾಗಲೂ ಅದೇನೂ ವೃತ್ತಿಗೆ ವಿಷಯವಾಗಿರುವದಿಲ್ಲ. ತಾನು ತಾನೇ ಆಗಿದ್ದು ವೃತ್ತಿಯಲ್ಲಿ ಬಂದು ತಾನಿರುವ ಬಗೆಯನ್ನು ವಿವರಿಸುತ್ತಾನೆ. ಹೀಗೇ ಮಾಡುವಾಗ ತನ್ನಲ್ಲಿ ಯಾವ ವಿಕಾರವೂ ಆಗಿರುವದಿಲ್ಲ. ಇದೇ ಅನುಭವದ ಸ್ವರೂಪ.

4. ಗಾಢನಿದ್ರೆಯಲ್ಲಿ 'ನಾನು' ಎಂಬ ಅಹಂಕಾರ ಮೊದಲುಗೊಂಡು ಯಾವುದೂ ಇಲ್ಲ ಎಂಬುದು ವೇದನೆಯಲ್ಲ – ಪ್ರತ್ಯಯವಲ್ಲ – ಭಾವನೆ ಯಲ್ಲ – ಸಾಧನೆಯಿಂದ ಬಂದ ಹೊಸದಾದ ವಿಲಕ್ಷಣಾನುಭವವಲ್ಲ. ಇದೇ ಸಾಕ್ಷ್ಯನುಭವವು. ಕನಸು ಹೀಗಿತ್ತು ಎಂಬುದೂ ಈ ಅನುಭವಕ್ಕೇ ಸೇರಿದ್ದು. ಎಚ್ಚರವನ್ನು ಉಂಡೆಯಾಗಿ ಅರಿಯುವದೂ ಇದೇ ಅನುಭವವೇ.

5. ಗಾಢನಿದ್ರೆಯಲ್ಲಿದ್ದ ನಿಮ್ಮ ಇರುವಿಕೆಯನ್ನು ಲಕ್ಷಿಸಿ ಎಚ್ಚರದ ಕಣ್ಣಿನಿಂದ ಅದರಲ್ಲಿ ಆರೋಪಿಸಿದ ನಿದ್ರೆ, ತಮ, ಅಜ್ಞಾನ, ಕಾರಣಶರೀರ ಅವ್ಯಕ್ತ ಮೊದಲಾದ ಎಲ್ಲ ಗ್ರಹಿಕೆಗಳನ್ನೂ ಕಿತ್ತೊಗೆದು ಈಗಲೂ ಆಗಿ ನಂತೆಯೇ ಇರುವ 'ತಾನು'ವನ್ನು ಮಾತ್ರವೇ ನಿರೀಕ್ಷಿಸಿರಿ. ಆಗ ನೀವೇ ಆ ಅನುಭವಸ್ವರೂಪವಾಗಿರುತ್ತೀರಿ. ಆ ನಿಮ್ಮ ಇರವನ್ನು ಈ ವೃತ್ತಿಗಳ ಮುಖಾಂತರ ನೀವೇ ಹೊರಪಡಿಸುವವರಾಗಿರುತ್ತೀರಿ.

6. ಈ ಕೆಳಗಿನ ಗ್ರಹಿಕೆಗಳನ್ನು ಇಟ್ಟುಕೊಳ್ಳಬೇಡಿರಿ – 1) ವೃತ್ತಿಗಳಿಂದ ಸ್ವರೂಪವನ್ನು ವಿಷಯೀಕರಿಸಿ ಸ್ವರೂಪಾನುಭವವನ್ನು ಹೊಂದಬೇಕು.

2) ವಿಶೇಷಸಾಧನೆಯ ಮೂಲಕ ಒಂದು ಸಮಯದಲ್ಲಿ ಈ ವೃತ್ತಿಗಳು ಒಂದಾನೊಂದು ಸ್ಥಿತಿಯಲ್ಲಿ ಮುಳುಗಿ ಕೆಲಕ್ಷಣ ಹಾಗೇ ಇದ್ದು 'ಅನಂತರ ಹೊರಗೆ ಬಂದು' ಅದೇ ತಾನು ಎಂಬ ಜ್ಞಾನವಾಗುತ್ತದೆ. 3) ಯೋಗ ಮಾಡುವಾಗ ಯೋಗ ಮುಗಿದಾಗ ತೀರಾ ವಿಲಕ್ಷಣವಾದ ಆನಂದಾ ವಿರ್ಭಾವವು ಉಂಟಾಗುವದು. 4) ನಿರ್ವಿಕಲ್ಪಸಮಾಧಿಯಂಥ ಅವಸ್ಥೆ ಬರುವದು. 5) ಅವ್ಯಕ್ತ, ತಮಸ್ಸು, ಅಂಧಕಾರ, ಶೂನ್ಯ ಇವು ಅಡ್ಡಬರುವವು ಎಂಬ ರೂಪದ ಪೂರ್ವಾಗ್ರಹಗಳನ್ನು ಎಂದೂ ಇಟ್ಟುಕೊಳ್ಳಬೇಡಿರಿ. ಮತ್ತು ಹೀಗೇ ವಿಚಾರಿಸಿರಿ. 1) ವೃತ್ತಿಗಳಿರುವದನ್ನೂ ಇಲ್ಲದನ್ನೂ ಅರಿಯುವ ಚೈತನ್ಯವೇ ತಾನಾಗಿದ್ದರಿಂದ ಈ 'ತಾನು' ವಿಷಯವಲ್ಲ 2) ಒಂದು ಸಮಯ, ಕ್ಷಣಗಳೆಲ್ಲವೂ ವೃತ್ತಿಯ ಈಚೆಗಿವೆ. ನೀವು ನಿಮ್ಮ ಸ್ವರೂಪವನ್ನು ಬಿಟ್ಟಿರುವ ಕ್ಷಣವಿಲ್ಲವೇ ಇಲ್ಲ. ಹೊಸದಾಗಿ ಸೇರುವ ಕ್ಷಣವು ಬರುವದಿಲ್ಲ. ಅದೇ ನಿಮ್ಮ ಸ್ವರೂಪ ಸ್ವಭಾವ 3) ವೃತ್ತಿಯಲ್ಲಿ ಬರುವ ಆನಂದವು ಮಿಥ್ಯಾಭಾಸವು. ಅದು ಬಂದರೂ ಅದನ್ನು ದಾಟಿ ಹೋಗಿರಿ. ವಿಚಾರದಿಂದ ತಳ್ಳಿಹಾಕಿರಿ. 4) ತಾನು ಯಾವ ಅವಸ್ಥೆಗೂ ಸೇರಿದವನಲ್ಲ. ತನ್ನಲ್ಲಿ ಎಲ್ಲ ಅವಸ್ಥೆಗಳೂ ಕಲ್ಪಿತವಾಗಿವೆ ಎಂದು ವಿಚಾರಿಸಿರಿ. 5) ಈ ಯೋಗದಲ್ಲಿ ಎಚ್ಚರದಿಂದಲೂ ವಿವೇಕಪೂರ್ವಕವಾಗಿಯೂ ಅಲ್ಲಲ್ಲಿ ನಿಂತು ಸ್ವರೂಪವನ್ನು ಅನುಭವ ಪೂರ್ವಕವಾಗಿ ಗೊತ್ತುಪಡಿಸುತ್ತ ಹೋಗುವದರಿಂದ ತಮಸ್ಸೇ ಮೊದಲಾದ್ದಕ್ಕೆ ಅವಕಾಶವೇ ಇಲ್ಲ. ಹಾಗೇನೇದರೂ ನಿದ್ರಾದಿದೋಷಗಳು ಕಂಡುಬಂದರೆ ಕೂಡಲೇ ಜಾಗ್ರತರಾಗಿ ಮತ್ತೆ ವಿವೇಕ ಮಾಡಿರಿ.

8. ಹೀಗೆ ವಿವೇಕದ ಬಲದಿಂದಲೇ ಏಕಾಗ್ರತೆಯನ್ನು ಸಾಧಿಸಿ ಹಿಂದೆ ಹೇಳಿದಂತೆ ಶ್ರವಣಮನನಗಳಲ್ಲಿ ನಿಶ್ಚಯವಾದ ಅನುಭವಸ್ವರೂಪನಾದ 'ತಾನು' ಎಂಬ ಸ್ವರೂಪವನ್ನೇ ಲಕ್ಷಿಸಿದಾಗ ಕೊನೆಗೆ ತಾನಾಗಿಯೇ ನಿಲ್ಲುವಿರಿ. ಅದು ನಿದ್ರೆಯಲ್ಲ, ಎಚ್ಚರವಲ್ಲ, ಕನಸಲ್ಲ, ನಿರ್ವಿಕಲ್ಪಸಮಾಧಿಯಲ್ಲ. ಎಲ್ಲ ಅವಸ್ಥೆಗಳಿಗೂ ಆಧಾರವಾದ 'ತಾನೇ' ಅದು. ಇದೇ ನನ್ನ ಸ್ವರೂಪ.

ಇದನ್ನುಳಿದು ಇನ್ನೊಂದಿಲ್ಲ, ಇನ್ನೊಂದೆಂಬುದು ''ಹುಸಿತೋರಿಕೆ'' ಎಂಬ ನಿಶ್ಚಯವು ನಿಮ್ಮಲ್ಲಿ ಹೊಸದಾಗಿ ಮಿಂಚುವದು. ಇದೂ ''ವೃತ್ತಿಜ್ಞಾನವೇ ಆದರೂ ಆ ನಿಶ್ಚಯವೃತ್ತಿ ಮಿಂಚುವುದೇ ಅಧ್ಯಾತ್ಮಯೋಗದ ಪರ್ಯವಸಾನ.'' ಈ ವ್ಯವಹಾರದೃಷ್ಟಿಯಿಂದ ಇದು ಒಂದು ಸಮಯದಲ್ಲಾದ ಘಟನೆ. ಈ ಘಟನೆಯಾಗಬೇಕಾದರೆ ತತ್ತ್ವತಃ ಆತ್ಮಸ್ವರೂಪದ ವಿಚಾರವೆಂಬ ಸಾಧನೆ ಯಿಂದ ಅನಾತ್ಮಗಳೊಂದೊಂದನ್ನೂ ಕೈಬಿಡುತ್ತಾ ಹೋಗಿ ಕೊನೆಗೆ ಆತ್ಮನಲ್ಲಿ ಮುಳುಗಿ – ಎಂದರೆ ವೃತ್ತಿಯು ತನ್ನ ವೃತ್ತತ್ವವನ್ನು ಕಳೆದುಕೊಂಡು (ವಿಷಯ – ವಿಷಯಿ – Perceiver-prceived ಎಂಬೆರಡೂ ಹುಸಿ ಎಂದು ನಿಶ್ಚಯಿಸಿ ಇದರ ತತ್ತ್ವವು ಈ ಆತ್ಮನೇ ಎಂದಾಗ ಸಹಜವಾಗಿಯೇ ಆತ್ಮನಾಗಿ ನಿಂತು) ಮತ್ತೆ ವೃತ್ತಿರೂಪದಿಂದ ಹೊರಬಿದ್ದೇ ಈ ಘಟನಾ ರೂಪವನ್ನು ತಾಳುತ್ತದೆ ಎಂದೇ ಹೇಳಬೇಕು. ಇದನ್ನೆ 'ಆತ್ಮಪ್ರತ್ಯಯ' ಎಂದು ಕರೆದಿದೆ. ಇದೆಲ್ಲವೂ ವ್ಯಾವಹಾರಿಕದೃಷ್ಟಿಯಿಂದ ಆಡಿದ ಮಾತೇ ಹೊರತು ನಿಜವಾಗಲೂ ಕಾಲದಲ್ಲಿ ಕಾರ್ಯಕಾರಣ ಭಾವಗಳಿಗೊಳಪಟ್ಟು ಉಂಟಾಗುವ ಘಟನಾ ವಿಶೇಷದಂತೆ ಇದಲ್ಲ ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಕೆಲವರಿಗೆ ಇದಾದಾಗ ಆನಂದಾದಿಗಳ ಆವಿರ್ಭಾವವೂ ಅವರವರ ಪೂರ್ವಸಾಧನಾದಿಗಳನ್ನವಲಂಬಿಸಿ ಹೆಚ್ಚು ಕಡಿಮೆ ಪ್ರಮಾಣ ದಿಂದ ಆಗಬಹುದಾದರೂ ಇವೆಲ್ಲವೂ ವೃತ್ತಿಯಾದ ಹುಸಿತೋರಿಕೆಯೇ ಆಗಿದೆ. ತನ್ನಲ್ಲಿ ಇದೂ ಇಲ್ಲ ಎಂದು ಸಹಜವಾಗಿ ನಿಂತಿರುವುದೇ ನೆಲೆನಿಲ್ಲುವಿಕೆಯು. ಆತ್ಮನನ್ನುಳಿದು ಇನ್ನೊಂದೆಂಬುದಿಲ್ಲವೇ ಇಲ್ಲವೆಂಬ ನಿರ್ಧಾರದಲ್ಲಿ ನಿಂತಾಗ ವಿಚಾರಿಸುವದಕ್ಕೆ ಏನೂ ಉಳಿಯುವದಿಲ್ಲವಾದ್ದ ರಿಂದ ಈ ನೆಲೆನಿಲ್ಲುವಿಕೆಯನ್ನು ''ನಿರ್ವಿಕಲ್ಪ'' ಎಂದು ವೇದಾಂತಿಗಳು ಕರೆಯುತ್ತಾರೆ. ಇದೇ ಸಹಜಸಮಾಧಿಯು. ಇದು ಒಂದು ಅವಸ್ಥಾ ವಿಶೇಷಕ್ಕೆ ಸೇರಿದ್ದಲ್ಲ, ಆತ್ಮವಿಚಾರದ ಪರ್ಯವಸಾನವಾದಾಗ ಸಹಜವಾಗಿರುವ ತಾನೆಂಬ ಸ್ವರೂಪವೇ ಇದು.

## ಗ್ರಂಥಕರ್ತರ ಕಿರುಪರಿಚಯ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಹೊಂಬಳ ಗ್ರಾಮದವರಾದ ಆಗರ್ಭ ಶ್ರೀಮಂತರಾದ ರಾಘವೇಂದ್ರರಾಯರ ಪುತ್ರರಾದ ಶ್ರೀದೇವರಾಯಕುಲಕರ್ಣಿಯವರು ತಾ। 2-12-1922 ರಲ್ಲಿ ಜನಿಸಿದರು. ಅನಂತರ ಪ್ರಾಪ್ತವಯಸ್ಕರಾದಾಗ ಶ್ರೀಅಗ್ನಿಹೋತ್ರಿ ಶಂಕರಭಟ್ಟರೆಂಬ ಗುರುಗಳಲ್ಲಿ ಸಂಸ್ಕೃತ ಭಾಷೆ ಹಾಗೂ ಅರ್ವಾಚೀನವೇದಾಂತ ಸಂಪ್ರದಾಯದಂತೆ ಶಂಕರ ವೇದಾಂತಾಧ್ಯಯನ ಮಾಡಿದರು. 1954ರಿಂದ ಹೊಳೆನರಸೀಪುರದ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ ಶಿಷ್ಯರಾಗಿ ಶಾಂಕರವೇದಾಂತವನ್ನು ಪ್ರಸ್ಥಾನತ್ರಯ ಶಂಕರ ಭಾಷ್ಯಾನುಸಾರವಾಗಿ ಅಧ್ಯಯನ ಮಾಡಿ ಪ್ರವಚನ ಹಾಗೂ ಗ್ರಂಥರಚನೆಗಳ ಮೂಲಕ ವೇದಾಂತತತ್ತ್ವ ಪ್ರಚಾರವನ್ನು ದೇಶ-ವಿದೇಶಗಳಲ್ಲಿ ಕೈಗೊಂಡರು. 1956 ರಿಂದ ಬೆಂಗಳೂರು ನಗರದಲ್ಲಿನೆಲೆಸಿದ್ದರು.

ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಇಂಗ್ಲಿಷ್ - ಭಾಷಾಭಿಜ್ಞರಾದ ಗ್ರಂಥಕರ್ತರು ತಮ್ಮ ಸಾವಿರಾರು ವೇದಾಂತ ಪ್ರವಚನಗಳ ಮೂಲಕ ಶಂಕರ ಸಿದ್ಧಾಂತವನ್ನು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಚಾರ ಮಾಡಿ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕೆಲವು ವಿದೇಶೀಯರು ಜಿಜ್ಞಾಸುಗಳಿಗೂ ಶಾಂಕರವೇದಾಂತವನ್ನು ಬೋಧಿಸಿದ್ದಾರೆ. ಸಾಧನಮಾರ್ಗದಲ್ಲಿಯೂ ಅನುಭವಿಗಳಾಗಿದ್ದು ಶ್ರೀ ದತ್ತಗುರುವಿನ ಉಪಾಸಕರೂ ಶಿಷ್ಟಾಚಾರ ಸಂಪ್ರದಾಯವಂತರೂ ಆಗಿದ್ದು ತಾ। 7-12-1993ರಂದು ತಮ್ಮ 72ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಈ ಮಹನೀಯರ ಅಮೋಘವಾದ ಅಧ್ಯಾತ್ಮವಿದ್ಯಾಪ್ರಚಾರ ಸೇವೆಗೆ ಕಾರ್ಯಾಲಯ ದವರು ಕೃತಜ್ಞರಾಗಿರುತ್ತಾರೆ.